بِسْمِ اللهِ الرَّحْمٰنِ الرَّحِيْمِ　نَحْمَدُهٗ وَنُصَلِّىْ عَلٰى رَسُوْلِهِ الْكَرِيْمِ　وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

# ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ವರ್ಷ: 04

ಸಂಚಿಕೆ: 22

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

01 ಜೂನ್ 2023, 01 ಎಹ್ಸಾನ್ 1402 ಹಿಜರಿ ಶಮ್ಸಿ,
11 ಝಿಲ್‌ಖಅ್‌ದಃ 1444 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

وَاعْلَمُوْٓا اَنَّمَآ اَمْوَالُكُمْ
وَاَوْلَادُكُمْ فِتْنَةٌ ۙ
وَّاَنَّ اللّٰهَ عِنْدَهٗٓ اَجْرٌ عَظِيْمٌ

(ಅನ್‌ಫಾಲ್: 29)

ಅಂದರೆ: ಖಂಡಿತವಾಗಿಯೂ ನಿಮ್ಮ ಸಂಪತ್ತು ಮತ್ತು ನಿಮ್ಮ ಸಂತಾನ ನಿಮಗೊಂದು ಪರೀಕ್ಷೆಯೆಂದೂ ಅಲ್ಲಾಹನ ಬಳಿಯಲ್ಲೇ ಅತಿ ದೊಡ್ಡ ಪ್ರತಿಫಲವಿದೆಯೆಂದೂ ತಿಳಿದುಕೊಳ್ಳಿರಿ.

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ನಿಮ್ಮಲ್ಲಿ ಒಳ್ಳೆಯವರು ಯಾರೆಂದರೆ ಅವರು ತಮ್ಮ ಸಾಲವನ್ನು ಉತ್ತಮ ರೀತಿಯಲ್ಲಿ ಪಾವತಿಸುತ್ತಾರೆ

**(2305)** ಹಝ್ರತ್ ಅಬು ಹುರೈರಾ(ರ) ವರದಿ ಮಾಡುತ್ತಾರೆ ರಸೂಲುಲ್ಲಾಹ್(ಸ) ಅವರು ಒಬ್ಬ ವ್ಯಕ್ತಿಯ ಒಂದು ವರ್ಷದ ಮರಿ ಒಂಟೆಗೆ ಸಾಲಗಾರ ಆಗಿದ್ದರು. ಅವನು ರಸೂಲುಲ್ಲಾಹ್(ಸ) ರವರನ್ನು ಕೇಳಲು ಬಂದನು. ಅದಕ್ಕೆ ರೂಲುಲ್ಲಾಹ್(ಸ) ಹೇಳಿದರು: ಅವನಿಗೆ ಕೊಡಿ. ಅದಕ್ಕೆ ಅವರು ಈ ವಯಸ್ಸಿನ ಒಂಟೆಯನ್ನು ಹುಡುಕಿದರು ಆದರೆ ಒಂದು ವರ್ಷದ ಒಂಟೆ ಅವರಿಗೆ ಕಂಡುಬಂದಿಲ್ಲ, ಅದಕ್ಕಿಂತ ದೊಡ್ಡ ಪ್ರಾಯದ ಒಂಟೆ ಕಂಡುಬಂತು. ಅದಕ್ಕೆ ರಸೂಲುಲ್ಲಾಹ್(ಸ) ಹೇಳಿದರು: ಅವನಿಗೆ (ದೊಡ್ಡ ಪ್ರಾಯದ ಒಂಟೆ) ನೀಡಿ. ಆ ವ್ಯಕ್ತಿ ಹೇಳಿದನು: ನೀವು (ನನ್ನ ಹಕ್ಕಿಗಿಂತ ಹೆಚ್ಚು) ಪಾವತಿಸಿದ್ದೀರಿ. ಅಲ್ಲಾಹನು ನಿಮಗೂ ಸಹ ಹೆಚ್ಚಾಗಿ ನೀಡಲಿ. ರಸೂಲುಲ್ಲಾಹ್(ಸ) ಹೇಳಿದರು: ನಿಮ್ಮಲ್ಲಿ ಒಳ್ಳೆಯವರು ಯಾರು ಎಂದರೆ ಅವರು ತಮ್ಮ ಸಾಲವನ್ನು ಉತ್ತಮ ರೀತಿಯಲ್ಲಿ ಪಾವತಿಸುತ್ತಾರೆ.

**(ವ್ಯಾಖ್ಯಾನ)** ಹಝ್ರತ್ ಸೈಯದ್ ಝೈನುಲ್ ಆಬಿದೀನ್ ವಲಿಯುಲ್ಲಾ ಶಾ ಸಾಹಿಬ್ ಹೇಳುತ್ತಾರೆ: ರಸೂಲುಲ್ಲಾಹ್(ಸ) ಅವರ ಪ್ರತಿನಿಧಿಯು ಅವರ ಪರವಾಗಿ ಆದೇಶದ ಜವಾಬ್ದಾರಿಯನ್ನು ಉತ್ತಮವಾಗಿ ನಿರ್ವಹಿಸಿದರು. ಕೆಲವೊಮ್ಮೆ ಒಬ್ಬ ವ್ಯಕ್ತಿಯು ಬೇರೆ ಸ್ಥಳಕ್ಕೆ ಹೋಗಿ ಕೆಲಸ ಮಾಡಲು ಸಾಧ್ಯವಿಲ್ಲ, ಆದ್ದರಿಂದ ಅವನಿಗೆ ವಕೀಲರ (ಪ್ರತಿನಿಧಿಯ) ಅಗತ್ಯವಿರುತ್ತದೆ ಮತ್ತು ಕೆಲವೊಮ್ಮೆ ಅವನಲ್ಲಿ ಸಾಮರ್ಥ್ಯವಿದ್ದು ಸಹ ಅವನಿಗೆ ವಕೀಲರ ಅವಶ್ಯಕತೆ ಇರುತ್ತದೆ. ಎರಡೂ ಪ್ರಕರಣಗಳಲ್ಲಿ, ವಕೀಲರನ್ನು ಮಾಡಲು ಸಮರ್ಥನೆ ಇದೆ.

ಜನರ ದೃಷ್ಟಿಯಲ್ಲಿ, ವಕಾಲತ್ತು ಸಂಪೂರ್ಣವಾಗಿ ಅನುಮತಿಸಲಾಗಿದೆ. ಇಮಾಮ್ ಅಬು ಹನೀಫಾ(ರಹ) ಅವರ ಪ್ರಕಾರ, ತನ್ನ ಸ್ವಂತ ನಗರದಲ್ಲಿ ಇರುವ ವ್ಯಕ್ತಿಯು ಅನಾರೋಗ್ಯದಿಂದ ಬಳಲುತ್ತಿದ್ದರೆ ಅಥವಾ ಪ್ರಯಾಣಕ್ಕೆ ಹೋಗುತ್ತದ್ದರೆ ಹೊರತು, ಅವನ ಉಪಸ್ಥಿತಿಯಲ್ಲಿ ವಕೀಲನ್ನು ನಿಯೋಜಿಸಲು ಅಗತ್ಯವಿಲ್ಲ. **(ಬುಖಾರಿ, ಸಂಪುಟ 4, ಕಿತಾಬ್ ಅಲ್–ವಕಲಾಹ್, 2008 ಖಾದಿಯಾನ್ ಪ್ರಕಟಿತ)**

## ಭಿನ್ನಾಭಿಪ್ರಾಯವಿದ್ದರೆ, ಏಕತೆ ಇಲ್ಲದಿದ್ದರೆ, ನೀವು ದುರದೃಷ್ಟರಾಗಿ ಉಳಿಯುವಿರಿ

## ಮೊದಲು ದೇವನ "ಏಕದೇವೋಪಾಸನೆಯನ್ನು" ಒಪ್ಪಿಕೊಳ್ಳಿ, ಎರಡನೆಯದಾಗಿ ಪರಸ್ಪರ ಪ್ರೀತಿ ಮತ್ತು ಸಹಾನುಭೂತಿ ತೋರಿಸಿ

### ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ಜಮಾಅತ್ತಿನ ಸದಸ್ಯರು ಪರಸ್ಪರ ಒಗ್ಗಟ್ಟು, ಪ್ರೀತಿ ಇರಿಸಿಕೊಳ್ಳಬೇಕು ಮತ್ತು ಒಟ್ಟಿಗೆ ಸೇರಿರಬೇಕು ಎಂದು ನಾನು ಈ ಹಿಂದೆ ಅನೇಕ ಬಾರಿ ಹೇಳಿದ್ದೇನೆ. ಸರ್ವಶಕ್ತನಾದ ಅಲ್ಲಾಹನು ಮುಸ್ಲಿಮರನ್ನು 'ನೀವೆಲ್ಲರು ಅವಿಭಾಜ್ಯ ಅಂಗವಾಗಿ ಒಂದೇ ಅಸ್ತಿತ್ವವಾಗಿರಬೇಕು ಇಲ್ಲದಿದ್ದರೆ ಕಷ್ಟವಾಗುವುದು' ಎಂದು ಬೋಧಿಸಿದ್ದಾನೆ. ನಮಾಝಿನಲ್ಲಿ ಒಟ್ಟಿಗೆ ನಿಲ್ಲುವ ಆಜ್ಞೆಯು ಏಕತೆಗಾಗಿಯೇ ಇರುವುದು. ವಿದ್ಯುಚ್ಛಕ್ತಿಯಂತೆ, ಒಬ್ಬರ ಒಳಿತು ಇನ್ನೊಬ್ಬರಲ್ಲಿ ಬಂದು ಸೇರುತ್ತದೆ. ಭಿನ್ನಾಭಿಪ್ರಾಯವಿದ್ದರೆ, ಏಕತೆ ಇಲ್ಲದಿದ್ದರೆ, ನೀವು ದುರದೃಷ್ಟವಂತರಾಗಿ ಉಳಿಯುತ್ತೀರಿ. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವಸಲ್ಲಮ್ ಹೇಳಿದರು: ಒಬ್ಬರನ್ನೊಬ್ಬರು ಪ್ರೀತಿಸಿ ಮತ್ತು ಅದೃಷ್ಯತೆಯಲ್ಲಿ ಪರಸ್ಪರ ಪ್ರಾರ್ಥಿಸಿರಿ. ಒಬ್ಬ ವ್ಯಕ್ತಿಯು ಅದೃಶ್ಯತೆಯಲ್ಲಿ ಪ್ರಾರ್ಥಿಸಿದರೆ, ದೇವದೂತರು ನಿಮಗೂ ಅದೇ ರೀತಿ ಆಗಲೀ ಎಂದು ಹೇಳುತ್ತಾನೆ. ಎಂತಹ ಉನ್ನತ ದರ್ಜೆಯ ವಿಷಯವಾಗಿದೆ. ಮಾನವ ಪ್ರಾರ್ಥನೆಯನ್ನು ಸ್ವೀಕರಿಸದಿದ್ದರೆ, ದೇವದೂತರ ಪ್ರಾರ್ಥನೆಯನ್ನು ಸ್ವೀಕರಿಸಲಾಗುತ್ತದೆ. ನಾನು ನಿಮ್ಮಲ್ಲಿ ಯಾವುದೇ ಭಿನ್ನಭಿಪ್ರಾಯವಿರಬಾರದು ಎಂದು ಸಲಹೆ ನೀಡುತ್ತೇನೆ ಮತ್ತು ಬಯಸುತ್ತೇನೆ.

ನಾನು ಎರಡು ಸಮಸ್ಯೆಗಳೊಂದಿಗೆ ಬಂದಿರುವೆನು. ಮೊದಲು ದೇವನ ಏಕದೇವೋಪಾಸನೆಯನ್ನು ಸಾರಲು. ಎರಡನೆಯದು ಪರಸ್ಪರಲ್ಲಿ ಪ್ರೀತಿ ಮತ್ತು ಸಹಾನುಭೂತಿ ತೋರಿಸಿ ಇತರರಿಗೆ ಈ ಪವಾಡ ಒಂದು ಉದಾಹರಣೆಯಾಗಿಸಲು. ಅಂದು ಇದು ಸಹಾಬರಲ್ಲಿ ಮೂಡಿದ ಪುರಾವೆಯಾಗಿತ್ತು. **ಕುನ್ತುಮ್ ಅಅ್‌ದಾಅನ್ ಫಅಲ್ಲಫ ಬೈನ ಖುಲೂಬಿಕುಮ್** (ಆಲಿಇಮ್ರಾನ್: 104) ನೆನಪಿಡಿ! ಒಟ್ಟಾಗಿ ಇರುವುದು ಒಂದು ಪವಾಡವಾಗಿದೆ. ನೆನಪಿಡಿ! ನಿಮ್ಮಲ್ಲಿ ಪ್ರತಿಯೊಬ್ಬರೂ ತನಗೆ ಇಷ್ಟವಾದದ್ದನ್ನು ತನ್ನ ಸಹೋದರನಿಗೆ ಇಷ್ಟಪಡದ ಹೊರತು ಅವನು ನನ್ನ ಜಮಾಅತಿನವನಲ್ಲ. ಆತನು ವಿಪತ್ತು ಮತ್ತು ತೊಂದರೆಯಲ್ಲಿದ್ದಾನೆ. ಆತನ ಕೊನೆ ಉತ್ತಮವಾಗಿರುವುದಿಲ್ಲ.

**(ಮಲ್‌ಫೂಝಾತ್, ಸಂಪುಟ–1, ಪುಟ–457, ಪ್ರಕಟಿತ 2018 ಖಾದಿಯಾನ್)**

**ಮುತ್ತಖಿ (ಭಯಭಕ್ತಿಯುಳ್ಳವನು) ವ್ಯಕ್ತಿ ಯಾರು ಎಂದರೆ ಸರ್ವಶಕ್ತನಾದ ಅಲ್ಲಾಹನೊಂದಿಗೆ ತನ್ನ ಸಂಬಂಧವನ್ನು ಬಲಪಡಿಸುತ್ತಾ ಅದನ್ನು ಎಷ್ಟರ ಮಟ್ಟಿಗೆ ಹೆಚ್ಚಿಸುತ್ತಾನೆಂದರೆ ಅಲ್ಲಾಹನು ಸ್ವತಃ ಅವನ ಗುರಾಣಿ ಮತ್ತು ರಕ್ಷಕನಾಗಬೇಕು.**

**ಮುಹ್ಸಿನ್ (ಸತ್ಕರ್ಮ ಮಾಡುವವರು) ಯಾರು ಎಂದರೆ ತಾನು ಸ್ವತಃ ಭದ್ರಪಡಿಸಿಕೊಂಡ ನಂತರ ಜಗತ್ತನ್ನು ಅಲ್ಲಾಹನ ರಕ್ಷಣೆಗೆ ತರಲು ಪ್ರಯತ್ನಿಸುತ್ತಾನೆ, ಆದ್ದರಿಂದ (ಮುತ್ತಖಿಗಿಂತ) ಭಯಭಕ್ತಿಯುಳ್ಳವನಿಗಿಂತ ಮುಹ್ಸಿನ್ (ಸತ್ಕರ್ಮ ಮಾಡುವವನ)ನ ಸ್ಥಾನಮಾನವು ಉನ್ನತವಾಗಿದೆ.**

ಹಝ್ರತ್ ಮುಸ್ಲೆಹ್ ಮೌಊದ್(ರ) ಅವರು ಸೂರಾ ಅಲ್–ನಹ್ಲ್ ಆಯತ್ 129 **ಇನ್ನಲ್ಲಾ ಮಅಲ್ಲಝೀನತ್ತಖೌ ವಲ್ಲಝೀನಹುಮ್ ಮುಹ್ಸಿನೂನ್** (ಅಂದರೆ: ನಿಶ್ಚಯವಾಗಿಯೂ ಭಯಭಕ್ತಿಯುಳ್ಳವರ ಮತ್ತು ಸತ್ಕರ್ಮ ಮಾಡುವವರ ಜೊತೆಯಲ್ಲಿ ಅಲ್ಲಾಹನಿದ್ದಾನೆ ಎಂಬುದರ ವ್ಯಾಖ್ಯಾನದಲ್ಲಿ ಹೇಳುತ್ತಾರೆ

ಮುತ್ತಖಿ (ಭಯಭಕ್ತಿಯುಳ್ಳವನು) ವ್ಯಕ್ತಿ ಯಾರು ಎಂದರೆ, ಸರ್ವಶಕ್ತನಾದ ಅಲ್ಲಾಹನೊಂದಿಗೆ ತನ್ನ ಸಂಬಂಧವನ್ನು ಬಲಪಡಿವವನು ಮತ್ತು ಅದನ್ನು ಎಷ್ಟರ ಮಟ್ಟಿಗೆ ಹೆಚ್ಚಿಸುತ್ತಾನೆಂದರೆ ಅಲ್ಲಾಹನು ಸ್ವತಃ ಅವನ ಗುರಾಣಿ ಮತ್ತು ರಕ್ಷಕನಾಗಬೇಕು. ಮುಹ್ಸಿನ್ (ಸತ್ಕರ್ಮ ಮಾಡುವವರು) ಎಂದರೆ ಯಾರು ಸ್ವತಃ ತನ್ನನ್ನು ಭದ್ರಪಡಿಸಿಕೊಂಡ ನಂತರ ಜಗತ್ತನ್ನು ಅಲ್ಲಾಹನ ರಕ್ಷಣೆಗೆ ತರಲು ಪ್ರಯತ್ನಿಸುವವನು, ಆದ್ದರಿಂದ (ಮುತ್ತಖಿಗಿಂತ) ಭಯಭಕ್ತಿಯುಳ್ಳವನಿಗಿಂತ ಮುಹ್ಸಿನ್ (ಸತ್ಕರ್ಮ ಮಾಡುವವನ)ನ ಸ್ಥಾನಮಾನವು ಉನ್ನತವಾಗಿದೆ.

ಕೆಲವರು ಸ್ವತಃ ಬಹಳ

*(ಪುಟ 10 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

ಅಜ್ಞಾನವು ನಿಜವಾದ ಧರ್ಮನಿಷ್ಠೆಯೊಂದಿಗೆ ಕೂಡಿರಲು ಸಾಧ್ಯವಿಲ್ಲ. (ಹಝ್ರತ್ ಮಸೀಹ್ ಮೌಊದ್[ಅ])

ಅಲ್ಲಾಹನು ನಮ್ಮ ದೌರ್ಬಲ್ಯಗಳನ್ನು ಕ್ಷಮಿಸುವಂತಾಗಲಿ. ಮತ್ತು ಅಲ್ಲಾಹನು ನಮ್ಮ ಮೇಲೆ ಕರುಣಿಸಲಿ ಮತ್ತು ಅಲ್ಲಾಹನು ನಮಗೆ ತಾನು ಬಯಸಿದ ರೀತಿಯಲ್ಲಿ ನಮ್ಮ ಜೀವನವನ್ನು ನಡೆಸುವ ಸಾಮರ್ಥ್ಯವನ್ನು ನೀಡಲಿ ಎಂದು ನಾವು ಪ್ರತಿಜ್ಞೆ ಮಾಡಬೇಕು ಮತ್ತು ಪ್ರಾರ್ಥಿಸಬೇಕು.

ಧರ್ಮನಿಷ್ಠೆ ಮುಖ್ಯ. ನಿರಂತರ ಪ್ರಾಮಾಣಿಕವಗಿ ಅಲ್ಲಾಹನ ಆದೇಶದನ್ವಯ ನಡೆಯುವುದು ಮುಖ್ಯವಾಗಿದೆ. ಅಲ್ಲಾಹನ ಭಯ ಮತ್ತು ಸಂತೃಪ್ತಿ ಪಡೆಯುವುದು ಮುಖ್ಯವಾಗಿದೆ.

ನಾವು ಸ್ವಯಂ ತಮ್ಮ ಜೀವನವನ್ನು ಭಯಭಕ್ತಿಯೊಂದಿಗೆ ಹಾಗೂ ಅಲ್ಲಾಹನ ಸಂಪ್ರೀತಿ ಬಯಸುತ್ತಾ ಕಳೆಯುವವರಾದರೆ, ನಾವು ನಮ್ಮ ಮಕ್ಕಳಿಗೂ, ಮುಂದಿನ ಪೀಳಿಗೆಗಳನ್ನೂ ತಮ್ಮ ಆದರ್ಶ ಪ್ರಸ್ತುತಪಡಿಸುವವರಾಗುವೆವು. ಅದರಿಂದ ಸತ್ಕರ್ಮಗಳ ಜಾಗೃತಿ ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ಮುಂದುವರೆಯುವಂತಾಗುತ್ತದೆ.

ರಮಝಾನ್ ತಿಂಗಳಿನಲ್ಲಿ ಅಲ್ಲಾಹನು ನಮಗೆ ಭಯಭಕ್ತಿಯ ಉನ್ನತಮಟ್ಟವನ್ನು ಪಡೆಯುವ ಮತ್ತು ತರಬೇತಿಯ ಒಂದು ಉತ್ತಮ ವಾತಾವರಣ ಒದಗಿಸಿಕೊಟ್ಟಿದ್ದನು. ಆದುದರಿಂದ ನಾವು ರಮಝಾನಿನ ನಂತರವೂ ನಮ್ಮ ತಖ್ವದ ಮಟ್ಟವನ್ನು ವರ್ಧಿಸುತ್ತಾ ಹೋಗುವೆವು ಮತ್ತು ಅದಕ್ಕಾಗಿ ಪ್ರಯತ್ನವನ್ನು ಮಾಡುವೆವು. ಆದರೆ ಯಾವುದೇ ಕಾರಣಕ್ಕೂ ರಮಝಾನ್ ನಂತರ ನಾವು ಮರಳಿ ಹಿಂದಕ್ಕೆ ಹೋಗುವಂತೆ ಆಗಬಾರದು.

ನಮಗೆ ಈ ವಿಷಯ ನಿರಂತರ ನೆನಪಿಡಬೇಕಾಗಿದೆ. ಇಂದಿನ ಕಾಲವು ವಿಶೇಷವಾಗಿ ಶೈತಾನನ ಆಕ್ರಮಣಗಳ ಕಾಲವಾಗಿದೆ. ಅದು ಅವನು ತನ್ನ ಎಲ್ಲಾ ತಂತ್ರ ಕುತಂತ್ರಗಳೊಂದಿಗೆ ಆಕ್ರಮಣಗೈಯುತ್ತಿದ್ದಾನೆ. ಎಂತಹ ಅಪಾಯಕರ ಆಕ್ರಮಣಗಳಾಗಿವೆ ಎಂದರೆ ಅದರ ಉದಾಹರಣೆ ಹಿಂದೆ ಎಲ್ಲೂ ಸಿಗಲು ಸಾಧ್ಯವಿಲ್ಲ. ಆದ್ದರಿಂದ ಇಂತಹ ಪರಿಸ್ಥಿತಿಗಳಲ್ಲಿ ನಗಮೆ ಅಲ್ಲಾಹನ ಮುಂದೆ ವಿಶೇಷ ರೀತಿಯಲ್ಲಿ ಬಾಗುವ ಅವಶ್ಯಕತೆ ಇದೆ.

ಎಲ್ಲ ಆಪತ್ತುಗಳಿಂದ ಮತ್ತು ಕಷ್ಟಗಳಿಂದ ರಕ್ಷಣೆ ಪಡೆಯಲು ಹಝ್ರತ್ ಮಸೀಹ್ ಮೌಊದ್ (ಅ) ನಮಗೆ ತೋರಿದ ಮಾರ್ಗವೆಂದರೆ, ನಾವು ನಿಷ್ಠಾಪೂರ್ವಕವಾಗಿ ಅಲ್ಲಾಹನ ಆಶ್ರಯ ಪಡೆಯಲು ಪ್ರಯತ್ನಪಡಬೇಕು. ಮತ್ತೆ ನೋಡಿ, ಅಲ್ಲಾಹನು ಯಾವ ರೀತಿ ನಿಮಗೆ ಶೈತಾನ ಹಾಗೂ ದಜ್ಜಾಲಿನ ಆಕ್ರಮಣಗಳಿಂದ ರಕ್ಷಿಸುವವನಾಗಿದ್ದಾನೆ.

ದುಆದಲ್ಲಿ ಒಂದು ಆಯಸ್ಕಾಂತ ರೀತಿಯ ಪ್ರಭಾವವಿರುತ್ತದೆ. ಅದು ಕರುಣೆ ಹಾಗೂ ಅನುಗ್ರಹವನ್ನು ತನ್ನಡೆ ಸೆಳೆಯುತ್ತದೆ. (ಹಝುರತ್ ಮಸೀಹ್ ಮೌಊದ್[ಅ])

ನೆನಪಿಡಿರಿ. ನಮಾಝ್ ಎಂತಹ ವಸ್ತುವಾಗಿದೆ ಎಂದರೆ ಅದರಿಂದ ಇಹಲೋಕವು ಸುಧಾರಿಸುತ್ತದೆ ಮತ್ತು ಪರಲೋಕವು ಸಹ (ಹಝ್ರತ್ ಮಸೀಹ್ ಮೌಊದ್ (ಅ))

ನಮ್ಮ ಆರಾಧನೆಯ ಗುಣಮಟ್ಟವನ್ನು ಹೆಚ್ಚಿಸುವುದು, ನಮ್ಮ ಪರಿಸ್ಥಿತಿಗಳನ್ನು ಸರಿಪಡಿಸುವುದು ಮತ್ತು ವಾಗ್ದತ್ತ ಮಸೀಹನ ಸಭೆಗೆ ಸೇರಲು ಅರ್ಹರಾಗಿರುವವರಲ್ಲಿ ಸೇರುವುದು ನಮ್ಮ ಅದೃಷ್ಟವಾಗಿದೆ.

ಮೂರು ದಿನ ಅಥವಾ ನಾಲ್ಕು ದಿನ ಅಥವಾ ವಾರದ ಮಟ್ಟಿಗೆ ದುಆ ಅಷ್ಟೇ ಅಲ್ಲ. ಬದಲು ನಿರಂತರವಾಗಿ ದುಆ ಮಾಡುತ್ತಿರಿ.

**ಹಝ್ರತ್ ಮಸೀಹ್ ಮೌಊದ್ (ಅ) ಅವರ ಜ್ಞಾನವರ್ಧಕ ಅಧ್ಯಾಪನೆಗಳ ಬೆಳಕಿನಲ್ಲಿ ತಖ್ವದ ವ್ಯಾಖ್ಯಾನ ಮತ್ತು ಅದನ್ನು ಪಡೆಯಲು ಉಪದೇಶ**

ಪಾಕಿಸ್ತಾನ ಮತ್ತು ಲೋಕದ್ಯಾಂತದಲ್ಲಿರುವ ಅಹ್ಮದಿಯರಿಗಾಗಿ ದುಆ ಮಾಡಲು ಉಪದೇಶ

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಟಿಲ್‌ಫೋರ್ಡ್, ಯು.ಕೆ, ಇಸ್ಲಾಮಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **31–03–2023** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ - بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعٰلَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಇಂದು ರಮಝಾನಿನ ಕೊನೆಯ ಜುಮುಅ ಆಗಿದೆ. ರಮಝಾನ್ ದಾಟಿ ಹೋಯಿತು. ರಮಝಾನಿನಲ್ಲಿ ಆರಾಧನೆ ಮಾಡಲು ಮತ್ತು ತಮ್ಮೊಳಗೆ ಪರಿಶುದ್ಧ ಬದಲಾವಣೆ ಮಾಡಲಿಕ್ಕಾಗಿ ಯೋಜನೆಗಳನ್ನು ಮಾಡಿದ, ಆದರೆ ಯೋಚಿಸಿದಂತೆ ಅವುಗಳ ಪ್ರಕಾರ ನಡೆಯಲು ಸಾಧ್ಯವಾಗದ ಅನೇಕ ಜನರು ಇರಬಹುದು. ಅನೇಕ ಜನರು ಹೀಗೆ ಹೇಳಿಕೊಂಡು ನನಗೆ ಪತ್ರ ಬರೆದಿರುವರು. ಇಂದು ರಮಝಾನಿನ ಕೊನೆಯ ದಿನವು ಸಹ ಕೆಲವೇ ಗಂಟೆಗಳಲ್ಲಿ ಮುಗಿಯಲಿದೆ. ಜುಮುಅ ದಿವಸವು ಅನುಗ್ರಹಿತ ದಿವಸವಾಗಿದೆ. ದುಆ ಮಾಡಿದರೆ ಸ್ವೀಕಾರಗೊಳ್ಳುವ ವಿಶೇಷ ಘಳಿಗೆ ಜುಮುಅದ ಅನುಗ್ರಹಿತ ದಿನದಂದು ಬರುತ್ತದೆ. (ಸಹೀಹ್ ಬುಖಾರಿ, ಕಿತಾಬುಲ್ ಜುಮುಅ, ಹದೀಸ್–935)

ಒಟ್ಟಿನಲ್ಲಿ ನಮ್ಮ ಬಯಕೆ ಪ್ರಕಾರ ಅಥವ ಒಬ್ಬ ಸತ್ಯವಿಶ್ವಾಸಿ ರಮಝಾನನ್ನು ಕಳೆಯಲು ಬಯಸುವ ರೀತಿಯಲ್ಲಿ ನಮ್ಮ ರಮಝಾನಿನ ದಿನಗಳು ಕಳೆದಿಲ್ಲವೆಂದಾದರೂ ಅಲ್ಲಾಹನು ನಮ್ಮ ದೌರ್ಭಲ್ಯಗಳನ್ನು

ಕಡೆಗಾಣಿಸುತ್ತಾ ನಮ್ಮ ಮೇಲೆ ಕೃಪೆತೋರುತ್ತಾ ನಮ್ಮ ಜೀವಿತಗಳನ್ನು ಸ್ಥಾಯಿಯಾಗಿ ಅಲ್ಲಾಹನು ಇಚ್ಛಿಸುವ ರೀತಿಯಲ್ಲಿ ಸಾಗಿಸಲು ನಮಗೆ ಸೌಭಾಗ್ಯ ನೀಡಲಿ ಎಂದು ನಾವು ಇಂದು ಪ್ರತಿಜ್ಞೆ ಮಾಡಬೇಕು ಮತ್ತು ದುಆ ಮಾಡಬೇಕು. ಬರುವ ಜುಮುಅವರೆಗೂ ತನ್ನ ಆರಾಧನೆಗಳನ್ನು ಅಲ್ಲಾಹನಿಗಾಗಿ ವಿಶಿಷ್ಟಗೊಳಿಸುವೆವು ಮತ್ತು ಪ್ರತಿ ಜುಮುಅದ ಮಧ್ಯ ಅವಧಿಯಲ್ಲೂ ತನ್ನ ಆರಾಧನೆಗಳನ್ನು ಮತ್ತು ಸತ್ಕರ್ಮಗಳನ್ನು ಮಾಡಲು ಪ್ರಯತ್ನಿಸುವೆವು. ಲೌಕಿಕತೆಯ ಮೇಲೆ ಧರ್ಮವನ್ನು ಆದ್ಯತೆ ನೀಡುವೆವು. ಮುಂದಿನ ರಮಝಾನ್‌ವರೆಗೆ ನಾವು ಈ ಕಾರ್ಯಕ್ರಮವನ್ನು ಪೂರ್ಣಗೊಳಿಸಲು ಪ್ರಯತ್ನಿಸುವೆವು. ರಮಝಾನ್ ತಿಂಗಳಿನಲ್ಲಿ ಯಾವ ಪವಿತ್ರ ಬದಲಾವಣೆಗಳನ್ನು ನಾವು ಮಾಡಿಕೊಳ್ಳಲು ನಿರ್ಧರಿಸಿದ್ದೆವು. ಯಾವುದೇ ಕಾರಣದಿಂದ ಅದನ್ನು ಸಾಧಿಸಲು ಆಗದಿದ್ದರೆ ಅದನ್ನು ಪೂರ್ಣಗೊಳಿಸಲು ಪ್ರಯತ್ನಿಸುವೆವು. ಇದಾಗಿದೆ ಭಯಭಕ್ತಿಯುಳ್ಳವರ ಸಂಗತಿ.

ನಾವು ನಿಷ್ಠಾಪೂರ್ವಕವಾಗಿ ತಮ್ಮ ಆರಾಧನೆಗಳನ್ನು ಮತ್ತು ತಮ್ಮ ಸತ್ಕರ್ಮಗಳನ್ನು ಅಲ್ಲಾಹನ ಸಾಮಿಪ್ಯಗೊಳಿಸಲು ಮಾಡುವವರಾದರೆ, ಅಲ್ಲಾಹನು ತುಂಬಾ ದಯವಂತನಾಗಿದ್ದಾನೆ. ಅವನು ಎಲ್ಲರಿಗಿಂತಲೂ ಅಧಿಕ ದಯವಂತನಾಗಿದ್ದಾನೆ, ಕರುಣಾನಿಧಿಯಾಗಿದ್ದಾನೆ. ಅವನು ನಮಗೆ ಅನುಗ್ರಹಿಸುವನು, ಅದರಿಂದ ನಮ್ಮಲ್ಲಿ ನಿಜವಾದ ಭಯಭಕ್ತಿ ಉಂಟಾಗುವುದು ಸ್ಥಾಯಿ ರೀತಿಯಲ್ಲಿ ಅಲ್ಲಾಹನ ಆಜ್ಞೆಗಳನ್ನು ಪಾಲಿಸುವುದೇ ಮುಖ್ಯವಾಗಿದೆ. ಅಲ್ಲಾಹನ ಭಯಭಕ್ತಿ ಮತ್ತು ಅವನ ಸಾಮಿಪ್ಯಗಳಿಸುವುದೇ ಮುಖ್ಯವಾಗಿದೆ. ನಾವು ಮರಳಿ ಮತ್ತೆ ಲೌಕಿಕತೆಗೆ ಹಿಂದಿರುಗದಿದ್ದರೆ, ಲೌಕಿಕತೆಯ ಮೇಲೆ ಧರ್ಮವನ್ನು ಆದ್ಯತೆ ನೀಡುವುದ ಮರೆಯದಿದ್ದರೆ, ನಮ್ಮ ಸಾಮರ್ಥ್ಯ ಮಟ್ಟಿಗೆ ಆರಾಧನೆ ಹಾಗೂ ಸುಧಾರಣೆಗೆ ಪ್ರಯತ್ನಪಟ್ಟಿದ್ದನ್ನು ಅಲ್ಲಾಹನು ಅದನ್ನು ಸ್ವೀಕರಿಸುತ್ತಾ ಅನುಗ್ರಹಿಸುವಂತಾಗಲಿ. ಇದು ಮುಖ್ಯವಾದ ವಿಷಯವಾಗಿದೆ. ಅದನ್ನು ನಾವು ಸದಾ ನೆನಪಿಡಬೇಕಾಗಿದೆ. ಈ ಉದ್ದೇಶವನ್ನು ಸಾಧಿಸಲು ಪ್ರತಿಯೊಬ್ಬ ಅಹ್ಮದಿ ಎಲ್ಲಾ ಸಮಯ ತಮ್ಮ ಮುಂದೆ ಇರಿಸಿಕೊಳ್ಳಬೇಕಾಗಿದೆ. ನಾವು ಸ್ವಯಂ ತಮ್ಮ ಜೀವಿತಗಳನ್ನು ಭಯಭಕ್ತಿಯ ಮಾರ್ಗದಲ್ಲಿ ನಡೆಸುವಂತಾದರೆ, ಅಲ್ಲಾಹನ ಸಂತುಷ್ಟಿ ಪ್ರಕಾರ ನಡೆಯುವವರಾದರೆ, ನಾವು ನಮ್ಮ ಮಕ್ಕಳನ್ನು ಮತ್ತು ಮುಂದಿನ ಪೀಳಿಗೆಗಳನ್ನು ತನ್ನ ಮಾದರಿ ಪ್ರಸ್ತುತಪಡಿಸುವವರಾಗುವೆವು. ಹೀಗೆ ಸತ್ಕರ್ಮಗಳ ಜಾಗೃತಿ ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ಮುಂದುವರೆಯುವುದು.

ನಾವು ಅಲ್ಲಾಹನ ಅನುಗ್ರಹದಿಂದ ಪ್ರಸ್ತುತ ಕಾಲದ ಇಮಾಮರನ್ನು ಮತ್ತು ಹಝ್ರತ್ ಪೈಗಂಬರ್ (ಸ) ರವರ ಸತ್ಯಸಂಧಕರ ಬೈಅತ್ ಮಾಡಿದ್ದೇವೆ. ಹಝ್ರತ್ ಮಸೀಹ್ ಮೌಊದ್ (ಅ) ಬಹಳ ಒತ್ತು ನೀಡಿದ ಉದ್ದೇಶ ತಖ್ವಾ ಗಳಿಸುವುದೇ ಆಗಿದೆ ನಮ್ಮ ತಖ್ವಾದ ಮಟ್ಟವನ್ನು ಉನ್ನತಗೊಳಿಸಲಿಕ್ಕಾಗಿಯೇ ಹಝ್ರತ್ ಮಸೀಹ್ ಮೌಊದ್ (ಅ) ರನ್ನು ಕಳುಹಿಸಲಾಗಿತ್ತು. ಈ ಉದ್ದೇಶವು ಒಂದು ತಿಂಗಳ ಆರಾಧನೆಗಳಿಂದ ಅಥವಾ ಒಳಿತುಗಳ ಪ್ರಯತ್ನಗಳಿಂದ ಗಳಿಸಲಾಗದು. ಯಥಾರ್ಥವಾದ ಸಂಗತಿ ಸ್ಥಿರಚಿತ್ತತೆಯಿಂದ ಅಲ್ಲಾಹನ ಆಜ್ಞೆಗಳನ್ನು ಪಾಲಿಸುವುದಾಗಿದೆ. ನಿಜವಾದ ಸಂಗತಿ ದೈವಭಯ ಮತ್ತು ಅವನ ಸಂಪ್ರೀತಿಯನ್ನೂ ಗಳಿಸುವುದಾಗಿದೆ ಇವುಗಳಿದ್ದರೆ ಮತ್ತು ಧರ್ಮಕ್ಕೆ ಲೌಕಿಕತೆಯ ಮೇಲೆ ಆದ್ಯತೆಯನ್ನು ನೀಡುವುದನ್ನು ಮರೆತು ಬಿಡುವಂತಹ ಈ ಲೌಕಿಕವಾದ ಜೀವಿತದ ಕಡೆಗೆ ಮರಳಿ ಹೋಗುವುದಲ್ಲವೆಂದಾದರೆ, ರಮಝಾನಿನಲ್ಲಿ ನಾವು ಹೇಗಾದರೂ ಮಾಡಿದ ಆರಾಧನೆಗಳು ಮತ್ತು ಸುಧಾರಣೆಯ ಪ್ರಯತ್ನಗಳನ್ನು ಅಲ್ಲಾಹನು ಸ್ವೀಕಾರ ಮಾಡುತ್ತಾ ನಮ್ಮನ್ನು ಅನುಗ್ರಹಿಸುವನು.

ಅಂದಹಾಗೆ ನಾನು ಹೇಳಿದಂತೆ ಹಝ್ರತ್ ಮಸೀಹ್ ಮೌಊದ್(ಅ) ನಮ್ಮ ತಖ್ವಾದ ಮಟ್ಟವನ್ನು ಉನ್ನತಗೊಳಿಸಲಿಕ್ಕಾಗಿಯೇ ಮತ್ತು ನಮ್ಮ ಸುಧಾರಣೆಗೋಸ್ಕರ ಕಳುಹಿಸಲಾಗಿದೆ. ಹಝ್ರತ್ ಮಸೀಹ್ ಮೌಊದ್ (ಅ) ಒತ್ತು ನೀಡಿದ ಉದ್ದೇಶ ತಖ್ವಾ ಗಳಿಸುವುದೇ ಆಗಿದೆ. ಒಂದು ಸಂದರ್ಭದಲ್ಲಿ ಅವರು(ಅ) ಹೇಳಿದರು. ಸತ್ಯ ಮತ್ತು ಸತ್ಯವಿಶ್ವಾಸದ ಕಾಲ ಪುನಃ ಆಗಮಿಸಲಿಕ್ಕಾಗಿ ಮತ್ತು ಹೃದಯಗಳಲ್ಲಿ ದೇವಭಕ್ತಿ ಉಂಟಾಗಲಿಕ್ಕಾಗಿ ನನ್ನನ್ನು ಕಳುಹಿಸಲಾಗಿದೆ. ಆದ್ದರಿಂದ ಈ ಕೆಲಸಗಳೇ ನನ್ನ ಅಸ್ತಿತ್ವದ ಪರಮ ಉದ್ದೇಶವಾಗಿದೆ. ನನಗೆ ತೋರಿಸಲಾಗಿದೆ. ಮತ್ತೆ ಆಕಾಶವು ಭೂಮಿಗೆ ಸಮೀಪವಾಗುವುದು, ಅದಾಗ್ಯೂ ಅದು ಬಹಳ ದೂರ ಹೋಗಿ ಬಿಟ್ಟಿತ್ತು. (ಕಿತಾಬುಲ್ ಬರಿಯ್ಯ, ರೂಹಾನಿ ಖಝಾಇನ್, ಸಂಪುಟ–13, ಪುಟ–293–294 ಅಡಿಟಿಪ್ಪಣಿ)

ಆದ್ದರಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕಾಲಘಟ್ಟ ನುಬುವ್ವತ್ ಮಾರ್ಗದ ಖಿಲಾಫತ್ತಿನಲ್ಲಿ ನೆಲೆಗೊಳ್ಳುತ್ತಾ ಹಝರತ್ ಪೈಗಂಬರ್(ಸ) ರ ಭವಿಷ್ಯವಾಣಿಗಳ ಪ್ರಕಾರ ಅಂತಿಮ ಕಾಲದವರೆಗೆ ಮುಂದುವರೆಯಲಿರುವ ಕಾಲಘಟ್ಟವಾಗಿದೆ. ಇದರಲ್ಲಿ ಹಝರತ್ ಮಸೀಹ್ ಮೌಊದ್ (ಅ) ಅನ್ನು ನಂಬುವವರೇ ಸತ್ಯದಲ್ಲಿ ನೆಲೆನಿಲ್ಲುತ್ತಾ ತಮ್ಮ ಆರಾಧನೆಗಳ ಮಟ್ಟವನ್ನು ಉನ್ನತಗೊಳಿಸಬೇಕಾಗಿದೆ. ಈ ಉದ್ದೇಶವು ಒಂದು ತಿಂಗಳ ಆರಾಧನೆಗಳಿಂದ ಅಥವಾ ಒಳಿತುಗಳ ಪ್ರಯತ್ನಗಳಿಂದ ಗಳಿಸಲಾಗದು. ನಾವು ನಮ್ಮ ಆರಾಧನೆಗಳನ್ನು ಸ್ಥಾಯಿಯಾಗುತ್ತಾ ನೆಲೆನಿಂತರೆ, ಅಂಥವರ ಕುರಿತು ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ (ಅ) ರೊಡನೆ "ನಾನು ನಿನ್ನೊಂದಿಗೆ ಮತ್ತು ನಿನ್ನ ಪ್ರಿಯರೊಂದಿಗೆ ಇರುವೆನು." (ತಝ್‌ಕಿರಃ, ಪುಟ–630, ಸಂಚಿಕೆ–4) ಆದ್ದರಿಂದ ನಾವು ಈ ರೀತಿಯಾಗಿ ತಮ್ಮ ಜೀವಿತಗಳನ್ನು ಸಾಗಿಸುವುದಾದರೆ, ನಾವು ನಮ್ಮ ಕೃತ್ಯಗಳಿಂದ ಲೋಕಕ್ಕೆ ಈ ಸಂದೇಶವನ್ನು ನೀಡುವವರಾಗುವೆವು. ನೀವು ಅಲ್ಲಾಹನ ಜೊತೆಗೆ ಜೀವಂತವಾದ ಸಂಬಂಧವನ್ನು ಉಂಟುಮಾಡಲು ಬಯಸುವುದಾದರೆ ಬನ್ನಿರಿ ಮತ್ತು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಸತ್ಯಸಂಧ ದಾನವನ್ನು ಸ್ವೀಕಾರ ಮಾಡಿರಿ.

ಇದು ತಖ್ವಾದ ಉನ್ನತ ಮಟ್ಟ ಸಾಧಿಸಿದಾಗ ಮಾತ್ರ ಸಾಧ್ಯವಾಗುವುದು. ಆಗ ನಮಗೆ ಅಲ್ಲಾಹನ ದೃಷ್ಟಾಂತಗಳನ್ನು ಕಾಣುವ ಭಾಗ್ಯ ದೊರೆಯುವುದು ಆದ್ದರಿಂದ ನಮ್ಮಲ್ಲಿ ಈ ಕೃತ್ಯವನ್ನು ಮನವರಿಕೆ ಮಾಡಿಕೊಂಡವರು ಮತ್ತು ತಮ್ಮ ಜಿವನಗಳನ್ನು ಸತ್ಕರ್ಮಗಳ ಹಾಗೂ ತಖ್ವಾದ ಉನ್ನತಮಟ್ಟದವರೆಗೆ ತಲುಪಿಸುವವರು. ಅಲ್ಲಾಹನ ಅನುಗ್ರಹಗಳ ದೃಶ್ಯಗಳನ್ನು ಕಾಣುವರು. ನಮ್ಮಲ್ಲಿ ಪ್ರತಿಯೊಬ್ಬರು ಈ ದೃಶ್ಯವನ್ನು ಕಾಣಬಹುದು. ಷರತ್ತೇನೆಂದರೆ ಅವರು ಅಲ್ಲಾಹನ ಆಜ್ಞೆಗಳ ಪ್ರಕಾರ ತಮ್ಮ ಜೀವನವನ್ನು ಸಾಗಿಸುವವರಾಗಬೇಕು ಮತ್ತು ತಖ್ವಾದ ಮಾರ್ಗಗಳಲ್ಲಿ ನಡೆಯುವವರಾಗಬೇಕು.

ಯಥಾರ್ಥವಾದ ತಖ್ವಾ ಏನು ಮತ್ತು ಅದರ ಪ್ರಕಾರ ನಡೆಯುವವನು ಹೇಗಿರುತ್ತಾನೆ ಮತ್ತು ಆತನೊಂದಿಗೆ ಅಲ್ಲಾಹನು ಹೇಗೆ ವರ್ತಿಸುತ್ತಾನೆ ಎಂಬುದಕ್ಕೆ ಸಂಬಂಧಪಟ್ಟ ಹಝರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ನೈಜವಾದ ತಖ್ವದ ಜೊತೆಗೆ ಅಜ್ಞಾನ ಬಂದು ಸೇರುವುದಿಲ್ಲ." ತಖ್ವವುಳ್ಳವನು ಅಜ್ಞಾನಿಯಾಗಲು ಸಾಧ್ಯವಿಲ್ಲ. ಇದು ಮೂಲಮಂತ್ರವಾಗಿದೆ. ಆದ್ದರಿಂದ ಈ ಮೂಲಮಂತ್ರ ಸದಾ ನಮಗೆ ನಮ್ಮ ಮುಂದಿರಿಸಿಕೊಳ್ಳಬೇಕಾಗಿದೆ ಮತ್ತು ನುಡಿದರು. ನೈಜವಾದ ತಖ್ವಿ ತನ್ನೊಂದಿಗೆ ಒಂದು ಪ್ರಕಾಶವನ್ನು ಇರಿಸುತ್ತದೆ. **ಯಾ ಅಯ್ಯುಹಲ್ಲಝೀನ ಆಮನೂ ಇನ್ ತತ್ತಖುಲ್ಲಾಹ ಯಜ್‌ಅಲ್ ಲಕುಮ್ ಘುರ್ಖಾನವ್ವ ಯುಕಫ್ಫಿರ್ ಅನ್‌ಕುಮ್ ಸಯಯಿಆತಿಕುಮ್** (ಅಲ್ ಅನ್‌ಫಾಲ್–30) **ವಯಜ್‌ಅಲ್ ಲಕುಮ್ ನೂರನ್ ತಮ್‌ಶೂನ ಬಿಹೀ** (ಅಲ್‌ಹದೀದ್–29) ಅಂದರೆ: ಎಲೈ ಲವಿಶ್ವಸಿಗಳೇ, ದೇವಭಕ್ತಿ ತೋರಿಸುವುದರಲ್ಲಿ ಸ್ಥಿರಚಿತ್ತರಾಗಿ ಇದ್ದರೆ ಮತ್ತು ಅಲ್ಲಾಹನಿಗಾಗಿ ದೇವಭಕ್ತಿಯಲ್ಲಿ ಸ್ಥಾಯಿಯಾಗಿ ಇರುವುದಾದರೆ ಈಗ ಸದೃಢವಾಗಿ ಇರುವ ಗುಣವನ್ನು ಅಳವಡಿಸಿಕೊಂಡರೆ ಅಲ್ಲಾಹನು ಮತ್ತು ಅನ್ಯರಲ್ಲಿ ಒಂದು ವ್ಯತ್ಯಾಸವನ್ನು ಇರಿಸುವನು."

ಹಝರತ್ ಮಸೀಹ್ ಮೌಊದ್(ಅ) ಈ ವಚನದ ವ್ಯಾಖ್ಯಾನ ಮಾಡುತ್ತಾ ಹೇಳುತ್ತಾರೆ: ಅಲ್ಲಾಹನ ತಖ್ವದ ಗುಣಕ್ಕೆ ಅನುಗುಣವಾಗಿ ದೃಢಚಿತ್ತತೆ ಅಳವಡಿಸಿಕೊಂಡರೆ ಅಲ್ಲಾಹನು ನಿಮ್ಮಲ್ಲಿ ಮತ್ತು ಅನ್ಯರಲ್ಲಿ ಒಂದು ವ್ಯತ್ಯಾಸವನ್ನು ಇರಿಸುವನು. ಆ ವ್ಯತ್ಯಾಸವೇನೆಂದರೆ, ನಿಮಗೆ ಒಂದು ಪ್ರಕಾಶವನ್ನು ನೀಡಲಾಗುವುದು. ಆ ಪ್ರಕಾಶ ನಿಮ್ಮ ಕೃತ್ಯಗಳು, ಮಾತುಗಳು, ಸಾಮರ್ಥ್ಯಗಳು ಮತ್ತು ಇಂದ್ರಿಯಾಗಳಲ್ಲಿ ಉಂಟಾಗುವುದು. ನಿಮ್ಮ ಬುದ್ಧಿಯಲ್ಲೂ ಪ್ರಕಾಶವಿರುವುದು ಮತ್ತು ನಿಮ್ಮ ಬರೀ ಮಾತಿನಲ್ಲೂ ಪ್ರಕಾಶವಿರುವುದು. ನಿಮ್ಮ ಕಣ್ಣುಗಳಲ್ಲೂ ಪ್ರಕಾಶವಿರುವುದು, ನಿಮ್ಮ ದೇಹಗಳಲ್ಲೂ, ನಿಮ್ಮ ನಾಲಿಗೆಗಳಲ್ಲೂ, ನಿಮ್ಮ ಹೇಳಿಕೆಗಳಲ್ಲೂ, ನಿಮ್ಮ ಪ್ರತಿ ಚಲನವಲನದಲ್ಲೂ ಪ್ರಕಾಶವಿರುವುದು. ಹೀಗೆ ನಿವು ನಡೆಯುವ ಮಾರ್ಗಗಳೆಲ್ಲೆಲ್ಲೂ ಪ್ರಕಾಶವಿರುವುದು. ಒಟ್ಟಿನಲ್ಲಿ ನಿಮ್ಮ ಎಲ್ಲ ಮಾರ್ಗಗಳಲ್ಲಿ, ನಿಮ್ಮ ಎಲ್ಲ ಗುಣಗಳಲ್ಲಿ, ನಿಮ್ಮ ಎಲ್ಲ ಇಂದ್ರಿಯಗಳಲ್ಲಿಯೂ ಪ್ರಕಾಶ ತುಂಬಿರುವುದು ಮತ್ತು ನೀವು ಸಾಕ್ಷಾತ್ ಪ್ರಕಾಶಮಯವಾಗಿರುವಿರಿ." (ಆಯಿನಾ ಕಮಾಲಾತ್ ಇಸ್ಲಾಂ, ರೂಹಾನಿ ಖಝಾಇನ್, ಸಂಪುಟ–5, ಪುಟ 177–178)

ಈ ಪದವಿಯನ್ನು ಗಳಿಸುವವರು ಸೌಭಾಗ್ಯಶಾಲಿಗಳು. ಅಲ್ಲಾಹನ ಸಂಪೂರ್ಣ ಅಧಿಕಾರ ನಮ್ಮ ನಡೆ ನುಡಿಯಿಂದ ವ್ಯಕ್ತವಾಗಬೇಕು, ನಮ್ಮ ಪ್ರತಿಯೊಂದು ನಡೆ ಅಲ್ಲಾಹನ ಸಂಪ್ರೀತಿಯ ಉದ್ದೇಶ ಹೊಂದಿರಬೇಕು. ನಮ್ಮ ನಡೆದಾಡುವಿಕೆ, ನಮ್ಮ ಏಳು ಬೀಳು, ಒಟ್ಟಿನಲ್ಲಿ ಎಲ್ಲ ಕ್ರಿಯೆಗಳೂ ಅಲ್ಲಾಹನ ಸಂಪ್ರೀತಿಯ ಉದ್ದೇಶವೇ ಒಳಗೊಂಡಿರಬೇಕು. ಹೀಗಿದಾಗ

ಮಾತ್ರ ನಾವು ಅಲ್ಲಾಹನ ಪ್ರಕಾಶ ಪಡೆಯುವವರಾಗುವೆವು. ಲೌಕಿಕ ವ್ಯಾಮೋಹದ ಬಯಸುವ ನಮ್ಮ ಉದ್ದೇಶ ಅಲ್ಲಾಹನ ಸಾಮಿಪ್ಯ ಹೊಂದುವುದು ಆಗಿರಬೇಕು. ಆಗ ನಾವು ಹಝ್ರತ್ ಮಸೀಹ್ ಮಲೌಊದ್(ಅ) ರವರ ಆಗಮನದ ಉದ್ದೇಶ ಈಡೇರುವವರಾಗುವೆವು. ನಾವು ನಮ್ಮ ಪ್ರತಿಜ್ಞೆಯನ್ನು ಪಾಲಿಸುವವರಾಗುವೆವು. ಈ ಪವಿತ್ರವಾದ ಬದಲಾವಣೆ ಹೊಂದುವ ಅಭಿಲಾಷೆ ಇಲ್ಲದಿದ್ದರೆ ಮತ್ತು ಅದಕ್ಕಾಗಿ ಪ್ರಯತ್ನ ಮಾಡುವವರಾಗದಿದ್ದರೆ ನಮ್ಮ ವಾದಗಳೆಲ್ಲ ಸರಿ ಎನ್ನಲಾಗದು. ನಾವು ರಮಝಾನಿನಲ್ಲಿ ಮಾಡಿದ ತಾತ್ಕಾಲಿಕ ಸತ್ಕರ್ಮಗಳು ಸಹ ಪ್ರಯೋಜನ ನೀಡದು. ಆದುದರಿಂದ ನಾವು ನಿರಂತರವಾಗಿ ಆತ್ಮಾವಲೋಕನೆ ಮಾಡಿಕೊಳ್ಳಬೇಕಾಗಿದೆ. ನಾವು ಈ ತಖ್ವವನ್ನು ಪಡೆಯಲು ನಿರಂತರವಾಗಿ ಪ್ರಯತ್ನಿಸಿದದೇವೆಯೋ ಅಥವಾ ಇಲ್ಲ ಎಂದು. ಅದನ್ನು ಪವಿತ್ರ ಖುರ್‌ಆನ್‌ನ ವಚನಗಳ ಪ್ರಕಾಶದಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ನಮಗೆ ವಿವರಿಸಿಕೊಟ್ಟಿರುವರು. ನಾವು ನಿಜವಾಗಿಯೂ ಈ ರೀತಿ ತಮ್ಮ ಜೀವನಗಳನ್ನು ನಡೆಸುವವರಾದರೆ ನಿಶ್ಚಿತವಾಗಿಯೂ ನಾವು ಶೈತಾನವನ್ನು ಜೀವನಗಳಲ್ಲಿ ನಡೆಸುವವರಾದರೆ ನಿಶ್ಚಿತವಾಗಿಯೂ ನಾವು ಶೈತಾನನನ್ನು ಎದುರಿಸಲು ಸಿದ್ಧರಾಗಿದ್ದೇವೆ ಎಂದರ್ಥ. ಆಗ ಅಲ್ಲಾಹನು ಸಹ ನಮಗೆ ವಸಹರಿಸುವನು ಮತ್ತು ಶೈತಾನನ ಆಕ್ರಮಣಗಳಿಗೆಲ್ಲ ವಿಫಲಗೊಳಿಸುವನು.

ಪ್ರಸ್ತುತ ಕಾಲಘಟ್ಟವು ವಿಶೇಷವಾಗಿ ಶೈತಾನನ ದಾಳಿಗಳ ಕಾಲವಾಗಿದೆ. ಅಲ್ಲಾಹನ ಸಹಾಯವಿಲ್ಲದೆ ಅವನ ಹಿಡಿತದಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ತಖ್ವದ ಮೇಲೆ ನಡೆಯುವವರೊಂದಿಗೆ ಅಲ್ಲಾಹನ ಸಹಾಯವಿರುತ್ತದೆ.

ಈ ಕಾಲಘಟ್ಟ ವಿಶೇಷವಾಗಿ ಶೈತಾನನ ದಾಳಿಗಳ ಕಾಲವಾಗಿದೆ ಎಂದು ಸದಾ ನೆನಪಿಡಬೇಕಾಗಿದೆ. ಅವನು ತನ್ನ ಎಲ್ಲ ಕುಯುಕ್ತಿಗಳು, ಕುತಂತ್ರಗಳು ಮತ್ತು ಆಯುಧಗಳಿಂದ ದಾಳಿ ಮಾಡುತ್ತಿದ್ದಾನೆ. ಇಂತಹ ಭಯಾನಕ ರೀತಿಯ ದಾಳಿಗಳು ಈ ಹಿಂದೆ ಬಂದಿರುವುದು ಉದಾಹರಣೆ ದೊರೆಯದು ಆದ್ದರಿಂದ ನಾವು ಅಲ್ಲಾಹನ ಕಡೆಗೆ ಮೊದಲಿಗಿಂತ ಹೆಚ್ಚು ಬಾಗುವ ಅವಶ್ಯಕತೆಯಿದೆ.

ಟಿ.ವಿಯಲ್ಲೂ, ಸೋಶಿಯಲ್ ಮೀಡಿಯಾದಲ್ಲೂ ಅಥವಾ ಶಾಲೆಯ ಮಕ್ಕಳ ಇವರ ಕಾರ್ಯಕ್ರಮಗಳಲ್ಲೂ, ಪ್ರತಿಯೊಂದೆಡೆ ಶೈತಾನನು ದಜ್ಜಾಲಿನ ಮೂಲಕ ಎಂತಹ ಬಲೆಯನ್ನು ಕಟ್ಟಿದ್ದಾನೆ ಎಂದರೆ, ಅದರಿಂದ ಅಲ್ಲಾಹನ ಕೃಪೆಯಿಲ್ಲದೇ ರಕ್ಷಣೆ ಪಡೆಯುವುದು ಅಸಾಧ್ಯ. ಈಗ ಅತ್ಯಂತ ಹೆಚ್ಚು ಚಿಂತೆ ನಮ್ಮ ಮಕ್ಕಳನ್ನು ಶೈತಾನನ ದಾಳಿಯಿಂದ ರಕ್ಷಿಸುವುದರ ಕುರಿತಾಗಿದೆ. ಇದಕ್ಕಾಗಿ ಹೆತ್ತವರು ಮತ್ತು ಜಮಾಅತಿನ ವ್ಯವಸ್ಥೆ ಪ್ರಯತ್ನ ಸಹ ಮಾಡಬೇಕು.

ಈ ಉದ್ದೇಶಕ್ಕಾಗಿ ಪ್ರತಿಯೊಬ್ಬ ಬುದ್ಧಿವಂತ ಮತ್ತು ಪ್ರೌಢ ಅಹ್ಮದಿಯು ತಖ್ವಾದ ಉನ್ನತ ಮಟ್ಟವನ್ನೂ ಗಳಿಸಬೇಕಾಗಿದೆ. ಆಗಲೇ ನಾವು ನಮ್ಮ ಸಂತಾನಗಳನ್ನು ಶೈತಾನನ ದಾಳಿಗಳಿಂದ ರಕ್ಷಿಸಲು ಸಾಧ್ಯ. ರಮಝಾನಿನ ನಂತರವೂ ನಾವು ಆರಾಮವಾಗಿ ಕುಳಿತುಕೊಳ್ಳಬಾರದು. ಬದಲಾಗಿ ಪವಿತ್ರ ಖುರ್‌ಆನ್‌ನ ಮತ್ತು ಧರ್ಮದ ಬಗ್ಗೆ ಇರುವ ನಮ್ಮ ಅರಿವನ್ನು ವರ್ಧಿಸಲು ಪ್ರಯತ್ನಿಸಬೇಕಾಗಿದೆ. ಅದರಿಂದ ನಮ್ಮ ಮನೆಗಳಲ್ಲಿ ಒಂದು ವಿಶೇಷ ರೀತಿಯ ವಾತಾವರಣ ನಿರ್ಮಿಸಬಹುದಾಗಿದೆ.

ತಮ್ಮ ಆರಾಧನೆಗಳ ರಕ್ಷಣೆ ಮಾಡಿಕೊಳ್ಳಬೇಕಾಗಿದೆ. ಶೈತಾನ ಮತ್ತು ದಜ್ಜಾಲಿನ ದಾಳಿಗಳಿಂದ ರಕ್ಷಣೆ ಪಡೆಯಲು ವಿಶೇಷವಾಗಿ ಪ್ರಾರ್ಥನೆಗಳ ಮೊರೆ ಹೋಗಬೇಕಾಗಿದೆ.

ಶೈತಾನನ ಕುಯುಕ್ತಿಗಳು ಮತ್ತು ಕುತಂತ್ರಗಳ ಬಗ್ಗೆ ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ (ಅ) ಒಂದು ಸಂದರ್ಭದಲ್ಲಿ ಹೀಗೆ ನುಡಿಯುತ್ತಾರೆ. ನೆನಪಿಡಬೇಕು. ದಜ್ಜಾಲ್ ಎಂದರೆ ಶೈತಾನನ ಪ್ರತಿರೂಪ. ಅದರ ಅರ್ಥ ಸನ್ಮಾರ್ಗವನ್ನು ತಪ್ಪಿಸಿ ದುರ್ಮಾರ್ಗದೆಡೆ ಎಳೆಯುವವನು. ಅದರ ಅಂತಿಮ ಕಾಲಘಟ್ಟದ ಯುದ್ಧಗಳು ನಡೆಯುವುವು. ಶೈತಾನನಿಗೆ ಸೋಲುಂಟಾಗುವುದು. ಅವರು(ಅ) ಮುಂದೆ ಹೇಳಿದರು. ಹಾಗೆ ನೋಡಿದರೆ ಎಲ್ಲ ನಬಿಗಳ ಅವಧಿಯಲ್ಲೂ ಶೈತಾನನು ಸೋಲುತ್ತಾನೆ. ಆದರೆ ಅದು ಕೇವಲ ತಾತ್ಕಾಲಿಕವಾಗಿತ್ತು ನಿಜವಾದ ಅರ್ಥದಲ್ಲಿ ಸೋಲುವುದು ಮಸೀಹನ ಕೈಯಲ್ಲಿ **ಜಾಯಿಲುಲ್ಲಝೀನತ್ತಬಊಕ ಫೌಖಲ್ಲಝೀನ ಕಫರೂ ಇಲಾ ಯೌಮಿಲ್ ಖಿಯಾಮ** (ಆಲಿ ಇಮ್ರಾನ್-456) ನುಡಿದನು, ಅಲ್ಲಾಹನು ಖಿಯಾಮತ್ (ಅಂತ್ಯ ತೀರ್ಮಾನ) ದಿನದ ತನಕ ನಿನ್ನ ಅನುಯಾಯಿಗಳಿಗೆ ವಿರೋಧಿಗಳ ಮೇಲೆ ವಿಜಯ ನೀಡುವನು.

ಆದರೆ ನಿಜವಾದ ಅನುಯಾಯಿಯಾಗಲು ಹಝ್ರತ್ ಮಸೀಹ್ ಮೌಊದ್(ಅ) ಅವರ ಶಿಕ್ಷಣದ ಮೇಲೆ ನಡೆಯಲು ತಖ್ವಾ ಹೊಂದಬೇಕಾಗುವುದು. ಆದ್ದರಿಂದ ಹೇಳಿದರು. ಒಟ್ಟಿನಲ್ಲಿ ಶೈತಾನನು ಈ ಅಂತಿಮ ಕಾಲಘಟ್ಟದಲ್ಲಿ ಪೂರ್ಣ ಶಕ್ತಿಯೊಂದಿಗೆ ದಾಳಿ ಮಾಡುತ್ತಿದ್ದಾನೆ. ಆದರೆ ಅಂತಿಮ ವಿಜಯ ನಮ್ಮದೇ ಆಗುವುದು.
(ಮಲ್ಫೂಝಾತ್, ಸಂಪುಟ-10, ಪುಟ-60, ಸಂಚಿಕೆ 1984) ಇನ್‌ಶಾಅಲ್ಲಾಹ್.

ಒಟ್ಟಿನಲ್ಲಿ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ (ಅ) ಅವರಿಗೆ ಶೈತಾನ ಮತ್ತು ದಜ್ಜಾಲಿನ ದಾಳಿಗಳಿಂದ ರಕ್ಷಣೆ ನೀಡುವ ಮತ್ತು ವಿಜಯ ನೀಡುವ ವಾಗ್ದಾನ ನೀಡಿದ್ದಾನೆ. ಅವರಿಗೆ(ಅ) ಎರಡು ಮೂರು ಸಲ ಈ ದಿವ್ಯವಾಣಿಯಾಗಿದೆ. ಆದರೆ ಅದರ ನಿಜವಾದ ಫಲಾನುಭವಿಗಳಾಗುವುದು ಅವರ ನಿಜವಾದ ರೀತಿಯಲ್ಲಿ ಅನುಸರಿಸುವವರಾಗುವರು. ಅವರ ಶಿಕ್ಷಣದಂತೆ ನಡೆಯುವವರಾಗುವರು, ಈ ಪೈಕಿ ಒಂದು ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ಅಲ್ಲಾಹನು ಖಿಯಾಮತ್ (ಅಂತ್ಯ ತೀರ್ಮಾನ) ದಿನದ ತನಕ ನನ್ನನ್ನು ಅನುಸರಿಸುವವರಿಗೆ ನನ್ನ ವಿರೋಧಿಗಳ ಮೇಲೆ ವಿಜಯ ನೀಡುವೆನು ಎಂಬುದು ಸತ್ಯಸಂಗತಿಯಾಗಿದೆ. ಆದರೆ ಯೋಚಿಸಬೇಕಾದ ಸಂಗತಿಯೇನೆಂದರೆ, ಎಲ್ಲಿಯವರೆಗೆ ಒಬ್ಬನು ತನ್ನೊಳಗೆ ಅನುಸರಣೆಯ ಪೂರ್ಣ ಅವಸ್ಥೆಯನ್ನು ಉಂಟು ಮಾಡುವುದಿಲ್ಲವೋ ಅಲ್ಲಿಯವರೆಗೆ ನನ್ನ ಕೈಯಲ್ಲಿ ಬೈಅತ್ ಮಾಡುವುದರಿಮದ ಒಬ್ಬ ವ್ಯಕ್ತಿ ನನ್ನನ್ನು ಅನುಸರಿಸುವವರಲ್ಲಿ ಸೇರುವುದಿಲ್ಲ, ಅವರು(ಅ) ಹೇಳಿದರು. ಇದರಿಂದ ತಿಳಿದುಬರುವುದೇನೆಂದರೆ ಅಲ್ಲಾಹನು ನನಗಾಗಿ ಒಂದು ಸಂಪೂರ್ಣ ವಿಧೇಯರಾದ, ನನ್ನ ಅನುಸರಣೆಯಲ್ಲಿ ಸಂಪೂರ್ಣ ತ್ಯಾಗಮಯಿಯಿಂದ ಜಮಅತನ್ನು ಸೃಷ್ಟಿಸಬಯಸುತ್ತಾನೆ. (ಮಲ್ಫೂಝಾತ್, ಸಂಪುಟ-8, ಪುಟ-299, ಸಂಚಿಕೆ 1984)

ಅಲ್ಲಾಹನು ಇಂತಹ ಜಮಾಅತ್ ಅವಶ್ಯವಾಗಿ ನೀಡುವನು. ಅದು ನಾವಾಗಲಿ ಅಥವಾ ಬೇರೆ ಜನರಿರಬಹುದು. ಇಂದು ಅಥವಾ ನಾಳೆ ಅಥವಾ ಹಿಂದಿನವರು ಅಥವಾ ನಮ್ಮಲ್ಲಿ ಕೆಲವರು ಅಥವಾ ಬಹುಸಂಖ್ಯೆಯಲ್ಲಿ ಈ ಜಮಾಅತ್ ನಿಮಗೆ ಅವಶ್ಯವಾಗಿ ದೊರೆಯುವುದು, ಇದು ಅಲ್ಲಾಹನ ವಾಗ್ದಾನವಾಗಿದೆ. ಆದ್ದರಿಂದ ಈ ಪದಗಳು ನಮಗೆ ಎಚ್ಚರಿಸುವಂತಾಗಿದೆ.

ನಮಗೆ ಆತ್ಮಾವಲೋಕನ ಮಾಡಿಕೊಳ್ಳುವ ಅವಶ್ಯಕತೆ ಇದೆ. ನಮ್ಮ ಅನುಸರಣೆ ಯಾವ ಮಟ್ಟದ್ದಾಗಿದೆ ಎಂದು. ಹಝ್ರತ್ ಮಸೀಹ್ ಮೌಊದ್ (ಅ) ರವರು ತಮ್ಮ ಜಮಾಅತ್ ಮತ್ತು ತಮ್ಮ ಸತ್ಯವಾದ ಅನುಯಾಯಿಗಳಿಗಾಗಿ ಮಾಡಿದ ದುಆಗಳಿಗೆ ನಾವು ಅರ್ಹರಾಗಿದದೇವೆಯೇ ಎಂದು. ನಾವೇನು ಅಲ್ಲಾಹನ ಆ ಅನುಗ್ರಹಗಳಿಗೆ ಪಾತ್ರರಾಗುವಂತೆ ಇದ್ದೇವೆಯೇ, ಅವರ (ಅ) ಅನುಯಾಯಿಗಳಿಗೆ ನೀಡಿದಂತಹ ವಾಗ್ದನಗಳಿಗೆ ಅರ್ಹರಾಗಿದ್ದೇವೆಯೇ, ಹಝ್ರತ್ ಮಸೀಹ್ ಮೌಊದ್(ಅ) ಬಯಸಿದ ರೀತಿಯ ಜಮಾಅತಿನ ಸದಸ್ಯರು ನಾವಾಗಿದ್ದೇವೆಯೇ?

ಇಲ್ಲವಾಗಿದ್ದರೆ ಇದು ಕೆಲ ದಿನಗಳ ಮಾತ್ರ ದುಆಗಳಾಗಿವೆ. ಕೇವಲ ರಮಝಾನ್‌ನಲ್ಲಿ ಮಾಡುವ ಮಾತ್ರ ದುಆಗಳಾಗಿವೆ. ಕೆಲವೇ ದಿನಗಳ ಆರಾಧನೆಗಳು ಮತ್ತು ನಮ್ಮ ರೋಧನೆ ನಮಗೆ ಹಝ್ರತ್ ಮಸೀಹ್ ಮೌಊದ್ (ಅ) ರವರಿಗೆ ನೀಡಿದ ಅನುಗ್ರಹಗಳ ವಾಗ್ದಾನಗಳಿಗೆ ಅರ್ಹರನ್ನಾಗಿ ಮಾಡುವುದಿಲ್ಲ.

ಮತ್ತು ಈ ಪೈಕಿ ಅವರು ತಮ್ಮ ಗ್ರಂಥವಾದ ಕಿಶ್ತಿ ಎ ನೂಹ್‌ನಲ್ಲಿ ಹೇಳುತ್ತಾರೆ: ತಿಳಿದುಕೊಳ್ಳಿರಿ. ಎಲ್ಲಿಯವರೆಗೆ ಹೃದಯದ ದೃಢ ಸಂಕಲ್ಪ ಮತ್ತು ದುಆದೊಂದಿಗೆ ನಡೆಯುವುದಿಲ್ಲವೋ ಅಲ್ಲಿಯವರೆಗೆ ಕೇವಲ ಬಾಯಿಮಾತಿನ ಬೈಅತ್ತಿನ ಒಪ್ಪಿಗೆ ಮಾಡುವುದರಿಂದ ಯಾವುದೇ ಅರ್ಥವಿಲ್ಲ, ಒಟ್ಟಿನಲ್ಲಿ ಯಾವ ವ್ಯಕ್ತಿ ನನ್ನ ಅಧ್ಯಾಪನೆ ಪ್ರಕಾರ ಪೂರ್ಣವಾಗಿ ನಡೆಯುತ್ತಾನೋ ಆತನು ಈ ನನ್ನ ಮನೆಯಲ್ಲಿ ಪ್ರವೇಶಿಸುತ್ತಾನೆ. ಅದರ ಕುರಿತು ಅಲ್ಲಾಹನ ವಚನದಲ್ಲಿ **"ಇನ್ನಿ ಉಹಾಫಿಝು ಕುಲ್ಲ ಮನ್ ಫಿದ್ದಾರ್"** ಎಂಬ ವಾಗ್ದಾನವಿದೆ ಎಂದರೆ, ನಿನ್ನ ನಾಲ್ಕು ಗೋಡೆಗಳ ಕಟ್ಟಡದ ಒಳಗೆ ಇರುವ ಪ್ರತಿಯೊಬ್ಬನನ್ನು ನಾನು ರಕ್ಷಿಸುವೆನು. (ಕಿಶ್ತಿ ಎ ನೂಹ್, ರೂಹಾನಿ ಖಝಾಈನ್, ಸಂಪುಟ-19, ಪುಟ-10).

ಆದ್ದರಿಂದ ಎಲ್ಲ ರೀತಿಯ ಆಪತ್ತುಗಳಿಂದ, ಕಷ್ಟಗಳಿಂದ ರಕ್ಷಣೆ ಪಡೆಯುವ ಉಪಾಯ ನಮಗೆ ಹಝ್ರತ್ ಮಸೀಹ್ ಮೌಊದ್ (ಅ) ತೋರಿಸುವರು. ಅದೇನೆಂದರೆ ನನ್ನ ಶಿಕ್ಷಣಾವ್ಯವಸ್ಥೆಯ ನಿಷ್ಠಾವಂತರಾಗಿ ಅಲ್ಲಾಹನ ಆಶ್ರಯವನ್ನು ಪಡೆಯಲು ಪ್ರಯತ್ನಿಸಿ, ಮತ್ತು ನೋಡಿ ಅಲ್ಲಾಹನು ಯಾವ ರೀತಿ ಶೈತಾನ ಮತ್ತು ದಜ್ಜಾಲಿನ ದಾಳಿಗಳಿಂದ ಅಲ್ಲಾಹನು ನಿಮಗೆ ರಕ್ಷಿಸುವನು. ಅಷ್ಟೇ ಅಲ್ಲ ಅಲ್ಲಾಹನು ನಮಗೆ ಅದಕ್ಕೆ ಬೇಕಾದ ಆಯುಧಗಳನ್ನು ಸಹ ನೀಡುವನು. ಅದರ ಬಳಕೆಯಿಂದ ನಾವು ಶೈತಾನನ ಮೇಲೆ ವಿಜಯ ಸಾಧಿಸುವರು. ಕೇವಲ ರಕ್ಷಣೆ ಪಡೆಯುವುದಿಲ್ಲ,

ಬದಲು ಅವನನ್ನು ಕೊಂದು ಹಾಕುವವರಾಗುವೆವು. ಮತ್ತು ಶೈತಾನನ್ನು ಸದಾ ಕಾಲಕ್ಕಾಗಿ ದೂರ ಮಾಡುವವರಾಗುವೆವು. ಹಾಗೂ ದಜ್ಜಾಲಿನ ದಾಳಿಗಳಿಂದ ರಕ್ಷಣೆ ಪಡೆಯುವೆವು. ಅದನ್ನು ವಿನಾಶಗೊಳಿಸುವೆವು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಒಂದು ಸಂದರ್ಭದಲ್ಲಿ ಹೀಗೆ ನುಡಿದರು. ಆದರೆ ನೆನಪಿಡಿರಿ. ಅದನ್ನು ಕೊಲ್ಲುವುದೆಂದರೆ, ಕೇವಲ ನಾಲಿಗೆಯಿಂದ ಶೈತಾನನನ್ನು ಕೊಂದೆವು ಎಂದರೆ ಆಗದು. ಬದಲು ನೀವು ಕೃತ್ಯರೂಪದಲ್ಲಿ ಮಾಡಿ ತೋರಿಸಬೇಕಾಗುವುದು, ಶೈತಾನನು ಮರಣ ಹೊಂದಿದ್ದಾನೆ ಎಂದು. ಶೈತಾನನ ಮರಣ ಮಾತಿನಿಂದ ಅಲ್ಲ, ಕೃತ್ಯದಿಂದ ತೋರಿಸಬೇಕಾಗಿದೆ. ಶೈತಾನನ ಮರಣದ ಘೋಷಣೆ ಕೇವಲ ಬಾಯಿಮಾತಿನಿಂದ ಮಾಡಿದಿರಿ, ಬದಲು ನಮ್ಮ ಪ್ರತಿಯೊಂದು ನಡೆ, ನಮ್ಮ ಕೃತ್ಯಗಳು, ನಮ್ಮ ಅವಸ್ಥೆಗಳು ಅದಕ್ಕೆ ಸಾಕ್ಷಿಯಾಗಿರಬೇಕು. ನಾವು ಶೈತಾನನನ್ನು ಕೊಂದು ಹಾಕಿದ್ದೇವೆ ಎಂದು. ಹೇಳಿದರು. ಅಲ್ಲಾಹನ ವಾಗ್ದಾನವಿದೆ. ಅಂತಿಮ ಮಸೀಹನ ಕಾಲದಲ್ಲಿ ಶೈತಾನನು ಪೂರ್ಣ ರೀತಿಯಲ್ಲಿ ಮರಣ ಹೊಂದುವನು ಎಂದು. ಹೇಳುತ್ತಾರೆ. ಶೈತಾನನು ಪ್ರತಿಯೊಬ್ಬ ಮನುಷ್ಯನ ಜೊತೆ ಇರುತ್ತಾನೆ. ಆದರೆ ನಮ್ಮ ನಬಿ(ಸ) ರವರ ಶೈತಾನನು ಮುಸಲ್ಮಾನನಾಗಿದ್ದನು. ಒಂದು ಉದಾಹರಣೆಯಿದೆ. ಸುನ್ನತ್ ರಸೂಲುಲ್ಲಾಹ್ (ಸ) ರವರ ಮಾದರಿ ನಮ್ಮ ಮುಂದಿದೆ. ಅವರು (ಸ) ಹೇಳಿದರು. ಶೈತಾನನ ಮೇಲೆ ವಿಜಯ ಪಡೆಯಬೇಕೆಂದು ಬಯಸುವಿರಾದರೆ ಈ ಸುನ್ನಿತನ ಮೇಲೆ ನಡೆಯುವುದು ನಮ್ಮ ಕರ್ತವ್ಯವಾಗಿದೆ. ಅವರು (ಅ) ಹೇಳಿದರು. ಅದೇ ರೀತಿ ಅಲ್ಲಾಹನ ವಾಗ್ದಾನ ವಿದೆ. ಈ ಕಾಲದಲ್ಲಿ ಶೈತಾನನ್ನು ಪೂರ್ಣ ರೀತಿಯಲ್ಲಿ ಕಿತ್ತು ಎಸೆಯಲಾಗುವುದು ಎಂದು. **ಲಾ ಹೌಲ** ಎಂದು ಹೇಳುವಾಗ ಶೈತಾನನು ಓಡಿ ಹೊಗುತ್ತಾನೆ ಎಂದು ನಿಮಗೆ ಗೊತ್ತೇ ಇದೆ. ಆದರೆ ಶೈತಾನನು ಕೇವಲ ಬಾಯಿಮಾತಿನ **ಲಾ ಹೌಲ** ಎಂಬ ದುಆಗಿಂದ ಓಡಿ ಹೋಗುವಂತಹ ಮುದ್ದನಲ್ಲ. ಈ ರೀತಿ ನಾವು ಒಂದು ನೂರು ಸಲ ಹೇಳಿದರೂ ಅವನು ಓಡಿ ಹೋಗಲು ಸಾಧ್ಯಯವಿಲ್ಲ. ಸತ್ಯಸಂಗತಿ ಏನೆಂದರೆ, ಯಾವ ಕಣಕಣದಲ್ಲಿ **ಲಾ ಹೌಲ** ನುಗ್ಗಿ ಹೊಗುತ್ತದೋ ಮತ್ತು ಯಾರು ಸದಾ ಅಲ್ಲಾಹನಿಂದಲೇ ಸಹಾಯ ಮತ್ತು ನೆರವನ್ನು ಬೇಡುತ್ತಿರುತ್ತಾರೋ. ಯಾರು ಅವನಿಂದಲೇ ಪ್ರಯೋಗವನ್ನು ಗಳಿಸುತ್ತಿರುತ್ತಾರೋ ಅಂಥವರು ಶೈತಾನದಿಂದ ರಕ್ಷಿಸಲ್ಪಡುತ್ತಾರೆ."

ಹೃದಂಯಾಂತರಾಳದಿಂದ ಧ್ವನಿ ಮೊಳಗುತ್ತದೆ. ಗುರಿ ತಿಳಿದಿರಬೇಕಾಗುತ್ತದೆ. ಕೇವಲ ಬಾಯಿಮಾತಿನಿಂದ ಏನೂ ಆಗುವುದಿಲ್ಲ. ಅಂಥವರೇ ವಿಜಯಿಯಾಗುವರು (ಮಲ್ಫೂಝಾತ್, ಸಂಪುಟ–10, ಪುಟ–61, ಸಂಚಿಕೆ 1984)

ತಮ್ಮ ಒಂದು ಸಭೆಯಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳಿದರು: ನೆನಪಿಡಿರಿ, ಅಲ್ಲಾಹನು ಪವಿತ್ರ ಖುರ್‌ಆನ್‌ನ ಪ್ರಾರಂಭವು ದುಆದಿಂದ ಮಾಡಿರುವನು ಮತ್ತು ಅದರ ಅಂತ್ಯವು ದುಆದಿಂದ ಆಗಿದೆ. ಅದರ ಅರ್ಥ ಮನುಷ್ಯನು ಎಷ್ಟೊಂದು ದುರ್ಬಲನಾಗಿದ್ದಾನೆಂದರೆ, ಅಲ್ಲಾಹನ ಅನುಗ್ರಹವಿಲ್ಲದೇ ಪವಿತ್ರನಾಗಲು ಸಾಧ್ಯವಿಲ್ಲ. ಸಭೆಯಲ್ಲಿ ಈ ವಿವರ ನೀಡಿದರು. ಒಂದು ವರದಿಯಲ್ಲಿ ಬೇರೆ ಕಡೆ ಇಂತಹದೊಂದು ವಾಕ್ಯ ಬರುತ್ತದೆ. ನೀವು ತಮ್ಮನ್ನು ತಾವು ಪವಿತ್ರನೆಂದು ಭಾವಿಸಿಕೊಳ್ಳಬೇಡಿರಿ, ಒಟ್ಟಿನಲ್ಲಿ ಮತ್ತು ಹೇಳಿದರು. ಅಲ್ಲಾಹನ ಸಹಾಯ ನೆರವು ದೊರೆಯುವವರೆಗೆ ಸತ್ಕರ್ಮಗಳಲ್ಲಿ ಅಭಿವೃದ್ಧಿಯಾಗಲು ಸಾಧ್ಯವಿಲ್ಲ. ಸತ್ಕರ್ಮಗಳಲ್ಲಿ ಅಭಿವೃದ್ಧಿಯಾಗಲು ಅಲ್ಲಾಹನ ನೆರವು ಅವಶ್ಯಕವಾಗಿದೆ. ಒಂದು ಹದೀಸಿನಲ್ಲಿ ಹೀಗಿದೆ. ಎಲ್ಲರೂ ಮೃತರೆ ಆದರೆ ಅಲ್ಲಾಹನು ಜೀವಂತಗೊಳಿಸಿದ ಹೊರತುಪಡಿಸಿ, ಎಲ್ಲರೂ ದುಮಾರ್ಗಿಗಳೇ ಆದರೆ ಅಲ್ಲಾಹನು ಸನ್ಮಾರ್ಗ ತೋರಿದ ಹೊರತುಪಡಿಸಿ, ಎಲ್ಲರೂ ಕರುಡರೇ ಆದರೆ ಅಲ್ಲಾಹನು ದೃಷ್ಟಿ ಕೆಟ್ಟವರ ಹೊರತುಪಡಿಸಿ.

ಒಟ್ಟಿನಲ್ಲಿ ಇದು ಸತ್ಯವಾದ ಮಾತಾಗಿದೆ. ಅಲ್ಲಾಹನ ಅನುಗ್ರಹವಿಲ್ಲದೆ ಲೌಕಿಕ ವ್ಯಾಮೋಹದ ಹಾರ ಕೊರಳಲ್ಲಿರುವವರೆಗೆ ಅದು ಸಾಧ್ಯವಾಗುವುದಿಲ್ಲ. ನಿಷ್ಠಾವಂತರು ಮಾತ್ರ ಅಲ್ಲಾಹನ ಅನುಗ್ರಹವು ಸಹ ದುಆದಿಂದಲೇ ಪ್ರಾರಂಭವಾಗುತ್ತದೆ. ಅಲ್ಲಾಹನ ಅನುಗ್ರಹ ಪಡೆಯಬೇಕಾದರೂ ದುಆ ಮಾಡಬೇಕಾಗಿದೆ. ಆದರೆ ದುಆ ಎಂದರೆ ಕೇವಲ ಬಾಯಿಯಿಂದ ಬಡಬಡಿಸುವುದೆಂದು ಭಾವಿಸಬೇಡಿರಿ. ಬದಲು ದುಆ ಎನ್ನುವುದು ಒಂದು ಮರಣವಾಗಿದೆ. ಮರಣದ ನಂತರ ಜೀವನ ದೊರೆಯುತ್ತದೆ. ಪಂಜಾಬಿನ ಒಂದು ಕವನ ಸಾಲಿನಂತೆ "ಜೋ ಮಂಗೆ ಸೋ ಮರ್ ರಹೇ, ಮರೇ ಸೋ ಮಂಗನ್ ಜಾ" ಎಂದರೆ ಬೇಡುವವನಿಗೆ ಒಂದು ಮರಣ ತನ್ನ ಮೇಲೆ ಸ್ವೀಕರಿಸಬೇಕಾಗುತ್ತದೆ. ಆದ್ದರಿಂದ ತನ್ನ ಮೇಲೆ ಮರಣ ಆವರಿಸಿಕೊಳ್ಳುವಂತಹ ಸಾಹಸವಿದ್ದರೆ ಮತ್ತು ಬೇಡಬಹುದಾಗಿದೆ. ಅದನ್ನು ಮಾಡುವವರಾದರೆ, ಬೇಡುವವರಾಗಿರಿ, ಹೇಳಿದರು. ದುಆದಲ್ಲಿ ಕ್ರಾಂತೀಯ ಪ್ರಭಾವ ಇರುತ್ತದೆ. ಅದು ಸಮೃದ್ಧಿ ಮತ್ತು ಅನುಗ್ರಹಗಳನ್ನು ತನ್ನ ಕಡೆಗೆ ಸೆಳೆಯುತ್ತದೆ ಬಾಯಿಮಾತಿನಿಂದ **ಇಹ್‌ದಿನಸ್ಸಿರಾತಲ್ ಮುಸ್ತಖೀಮ್'** ಎಂದು ದುಆ ಮಾಡುವುದು ದುಆ ಅಲ್ಲ, ಬಾಯಿಮಾತಿನಲ್ಲಿ ದುಆ ಮತ್ತು ಹೃದಯದಲ್ಲಿ ಬೇರೆ ಗುರಿ ಇದ್ದರೆ ಅದು ದುಆ ಎನ್ನಲು ಆಗುವುದಿಲ್ಲ. ನಮ್ಮ ಮಾತುಗಳು, ಗುರಿಗಳು ಲೌಕಿಕವಾಗಿದ್ದರೆ ಮತ್ತು ನಾಮಮಾತ್ರಕ್ಕಾಗಿ ದುಆ ಉಚ್ಚರಿಸುತ್ತಿದ್ದರೆ, ಅದು ಸಮಯ ವ್ಯರ್ಥ ಮಾಡಿದಂತೆಯೇ ಸರಿ. ಎಲ್ಲಿಯವರೆಗೆ ಮನುಷ್ಯನು ಅಲ್ಲಾಹನ ಗ್ರಂಥಕ್ಕೆ ಆಧ್ಯತೆ ನೀಡುವುದಿಲ್ಲವೋ ಮತ್ತು ಅದರ ಪ್ರಕಾರ ನಡೆಯುವುದಿಲ್ಲವೋ ಅಲ್ಲಿಯವರೆಗೆ ಆತನ ನಮಾಝ್ ಕೇವಲ ಸಮಯವನ್ನು ವ್ಯರ್ಥಗೊಳಿಸುವಂಥದ್ದಾಗಿದೆ. ಅಲ್ಲಾಹನು ನಮಗೆ ಪವಿತ್ರ ಖುರ್‌ಆನ್‌ನಲ್ಲಿ ಏನು ಆಜ್ಞೆಗಳನ್ನು ನೀಡಿದ್ದಾನೆ ಅದನ್ನು ಓದಿರಿ. ರಂಝಾನಿನಲ್ಲಿ ಅದನ್ನು ನಾವು ಓದಿದ್ದೆವು. ಉಪದೇಶಗಳು ಸಹ ಆಲಿಸಿದೆವು. ಅದರಂತೆ ನಡೆಯಿರಿ. ಮತ್ತು ನೋಡಿ ಅದೇ ಜೀವನವು ನಿಜವಾದ ಜೀವನವಾಗಿದೆ. ಅಂಥವರನ್ನು ಅಲ್ಲಾಹನು ಅನುಗ್ರಹಿಸುವನು.

ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ನುಡಿಯುತ್ತಾರೆ. ಪವಿತ್ರ ಖುರ್‌ಆನ್‌ನಲ್ಲಿ ಸ್ಪಷ್ಟವಾಗಿ ಬರೆಯಲಾಗಿದೆ. **"ಖದ್ ಅಫ್‌ಲಹಲ್ ಮುಮಿನೂನ್. ಅಲ್ಲಝೀನ ಹುವ್ ಫೀ ಸಲಾತಿಹಿಮ್ ಖಾಶಿಊನ್** (ಅಲ್‌ಮುಮಿನೀನ್: 2–3) ಎಂದರೆ ದುಆ ಮಾಡುತ್ತಾ ಮಾಡುತ್ತಾ ಹೃದಯವು ಕರಗಿದರೆ, ಅಲ್ಲಾಹನ ಆಸ್ಥಾನದಲ್ಲಿ ನಿಷ್ಠರಾಗಿ ಇದ್ದುಬಿಟ್ಟರೆ, ಅವನಲ್ಲಿಯೇ ಕಳೆದು ಹೋದರೆ, ಎಲ್ಲ ಭಾವನೆಗಳನ್ನು ಬಿಟ್ಟು, ಅಳಿಸಿ ಹಾಕಿ ಅವನಿಂದಲೇ ಅನುಗ್ರಹ, ನೆರವು ಬೇಡುವವನಾದರೆ, ಅವನಲ್ಲಿಯೇ ಮಗ್ನರಾದರೆ ಒಂದು ರೀತಿಯ ಸಂತೋಷ ಲವಲವಿಕೆ ಉಂಟಾಗುತ್ತದೆ. ಆಗ ವಿಜಯದ ದ್ವಾರ ತೆರೆಯುತ್ತದೆ. ಅಲ್ಲಾಹನ ಭಯದಿಂದ ತುಂಬಿರುವಂತಹ ಸತ್ಯವಿಶ್ವಾಸಿಗಳ ನಮಾಝ್ ವಿಜಯ ನೀಡುತ್ತದೆ. ಅಲ್ಲಾಹನಿಗಾಗಿ ತಮ್ಮ ಸರ್ವಸ್ವ ಒಪ್ಪಿಸಿ ಪ್ರಾರ್ಥಿಸಿದಾಗ ಮಾತ್ರ ಪ್ರಾರ್ಥನೆಗಳು ಸ್ವೀಕಾರವಾಗುತ್ತದೆ. ಆಗ ವಿಜಯದ ಬಾಗಿಲು ತೆರೆಯುತ್ತದೆ. ಆದ್ದರಿಂದ ಲೌಕಿಕ ಪ್ರೇಮ ತಣ್ಣಗಾಗುತ್ತದೆ. ಏಕೆಂದರೆ ಎರಡು ಪ್ರೇಮಿಗಳು ಒಟ್ಟು ಸೇರುವುದಿಲ್ಲ. ಉದಾಹರಣೆಗೆ ಬರೆಯಲಾಗಿದೆ.

"ಹಮ್ ಖುದಾಖಾಹಿ ವ ಹಮ್ ದುನಿಯಾಯೆ ದೂಂ
ಈಂ ಖಯಾಲ್ ಅಸ್ತ್ ವ ಮಹಾಲ್ ಅಸ್ತ್ ವ ಜುನೂಂ."

ಅಂದರೆ ಒಂದೆಡೆ ನೀನು ಜೀವನದಲ್ಲಿ ಪ್ರೀತಿಸುವ ವಾದ ಮಾಡುತ್ತಿದಿ ಮತ್ತು ಇನ್ನೊಂದೆಡೆ ಲೌಕಿಕ ಮೋಹವು ಇದೆ. ಈ ಎರಡು ಒಟ್ಟುಗೂಡಲು ಸಾಧ್ಯವಿಲ್ಲ. ಇದು ಹುಚ್ಚುತನದ ಮಾತುಗಳಾಗಿವೆ. ಆದುದರಿಂದ ಅದರ ನಂತರ ಅಲ್ಲಾಹನು ಹೇಳಿದನು. **ವಲ್ಲಝೀನ ಅನಿಲ್ ಲಘ್ವಿ ಮುರಿಝೂನ್** (ಅಲ್ ಮುಮಿನೂನ್: 4) ಇಲ್ಲಿ ಲಗ್ವು ತಾತ್ಪರ್ಯ ಲೌಕಿಕತನವಾಗಿದೆ. ಮನುಷ್ಯನು ನಮಾಝುಗಳಲ್ಲಿ ಭಯಭಕ್ತಿ ಪಡೆಯುವವನಾದರೆ ಅದರ ಪರಿಣಾಮವಾಗಿ ಲೌಕಿಕ ಪ್ರೇಮ ತಣ್ಣಗಾಗುತ್ತದೆ. ಅದರರ್ಥ ಕೃಷಿ, ವ್ಯಾಪಾರ, ನೌಕರಿ ಬಿಡಬೇಕು ಎನ್ನುವುದಲ್ಲ, ಬದಲು ಮೋಸಗೊಳಿಸುವಂತಹ ಲೌಕಿಕ ಕಾರ್ಯಗಳು ಮತ್ತು ದೇವನಿಂದ ದೂರ ಮಾಡುವ ಕಾರ್ಯಗಳು ಸಲ್ಲದು ಎಂದರ್ಥ. ಅಲ್ಲಾಹನ ಆಜ್ಞೆಗಳಿಗೆ ವಿರುದ್ಧವಾದ ಕಾರ್ಯಗಳಿಂದ ಉಳಿಯಬೇಕಾಗಿದೆ. ಈ ಪೈಕಿ ಇನ್ನಷ್ಟು ವಿವರ ನೀಡುತ್ತಾ ಹೀಗೆ ಬರೆದಿದ್ದಾರೆ. ಇದೊಂದು ಸಭೆಯಲ್ಲಿ ನಡೆದ ವಿವರವಾಗಿದೆ. ಹೇಳಿದರು. ಅಲ್ಲಾಹನು ಹೇಳಿದನು. **ರಿಜಾಲು ಲ್ಲಾ ತುಲ್‌ಹೀಹಿಮ್ ತಿಜಾರತುವ್ವ ಲಾ ಬೈಉನ್ ಅನ್ ಝಿಕ್ರಿಲ್ಲಾಹ್** (ಅನ್ನೂರ್–38) ಲೌಕಿಕ ಕಾರ್ಯಗಳಲ್ಲಿಯೂ ಒಂದು ಕ್ಷಣವು ಸಹ ನನ್ನನ್ನು ಮರೆಯದೇ ಇರುವಂತಹ ನನ್ನ ದಾಸರಿದ್ದಾರೆ. ಕಾರ್ಯನಿರಂತರನಾಗಿದ್ದರೂ ನನ್ನನ್ನು ಮರೆಯುವುದಿಲ್ಲ. ಹೇಳಿದರು. ಅಲ್ಲಾಹನೊಂದಿಗೆ ಸಂಬಂಧ ಹೊಂದಿದವನು ಲೌಕಿಕವಾದಿಯಾಗುವುದಿಲ್ಲ. ಬದಲು ಯಾರು ದೇವನನ್ನು ಮರೆಯುವವನು ಅವನು ಲೌಕಿಕವಾದಿಯಾಗಿರುತ್ತಾನೆ.

ಒಟ್ಟಿನಲ್ಲಿ ಅಲ್ಲಾಹನ ದಾಸರ ಬಗ್ಗೆ ಕೊಂಡುಳುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು. ಅಲ್ಲಾಹನ ಮುಂದೆ ಅಳುವವರು, ಅವನ ಆಸ್ಥಾನದಲ್ಲಿ ವಿನಯ ತೋರುವವರು, ಅದರ ಪರಿಣಾಮವಾಗಿ ಇಂತಹ ವ್ಯಕ್ತಿಯು ಧರ್ಮದ ಪ್ರೀತಿಯನ್ನು, ಲೌಕಿಕ ಪ್ರೀತಿ ವ್ಯಾಮೋಹದಿಂದ ಮುಕ್ತಗೊಳಿಸಿಕೊಳ್ಳುತ್ತಾನೆ. ಇದು ಧರ್ಮವನ್ನು ಲೌಕಿಕತೆಯ ಮೇಲೆ ಆಧ್ಯತೆ ನೀಡುವುದಾಗಿದೆ.

ಒಂದು ಸತ್ಕರ್ಮವು ಇನ್ನೊಂದು ಸತ್ಕರ್ಮಕ್ಕೆ ಪ್ರೇರಣೆ ನೀಡುತ್ತದೆ ಎಂಬುದು ತತ್ವಾಧಾರಿತ ಮಾತಾಗಿದೆ. ಹಾಗೆಯೇ ಒಂದು ದುಷ್ಕರ್ಮವು ಮತ್ತೊಂದು ದುಷ್ಕರ್ಮಕ್ಕೆ ಪ್ರೇಮರಣೆ ನೀಡುತ್ತದೆ. ಜನರು ತಮ್ಮ ಆರಾಧನೆಗಳನ್ನು (ನಮಾಝ್) ನಿಷ್ಠಾಪೂರ್ವಕ ನಿರ್ವಹಿಸಿದರೆ ಅದರ

ಪರಿಣಾಮವಾಗಿ ಸಹಜವಾಗಿ ಕುಲ್ಲಕ ವಿಷಯಗಳಿಂದ ದೂರವಾಗುತ್ತಾರೆ. ಈ ಪಾಪಕರ ಲೋಕದಿಂದ ಮುಕ್ತಿ ಪಡೆಯುತ್ತಾರೆ. ಇಹಲೋಕದ ಮೋಹ ತಣ್ಣಗಾಗಿ ಇಹಲೋಕದ ಮೋಹ ತಣ್ಣಗಾಗಿ ಅವರಲ್ಲಿ ದೇವನ ಪ್ರೀತಿ ಉಂಟಾಗುತ್ತದೆ. (ಮಲ್ಫೂಝಾತ್, ಸಂಪುಟ-10, ಪುಟ-62-64, ಅಡಿಟಿಪ್ಪಣಿಯೊಂದಿಗೆ)

ನಮಾಝ್‌ಗಳು ಅವರನ್ನು ಸತ್ಕರ್ಮದೆಡೆ ಪ್ರೇರಣೆ ನೀಡುತ್ತದೆ. ಲೌಕಿಕ ಕಾರ್ಯಗಳು ಇದ್ದರೂ ಸಹ ಲೌಕಿಕತೆ ಅವರ ಗುರಿಯಾಗಿರುವುದಿಲ್ಲ. ಈ ಪೈಕಿ ಹಿಂದಿನ ಖುತುಬದಲ್ಲಿ ನಾನು **ಲಾ ಇಲಾಹ ಇಲ್ಲಲ್ಲಾಹ** ವಿಶ್ಲೇಷಣೆಯಲ್ಲಿ ಈ ಮಾತು ವಿವರಿಸಿದ್ದೇನೆ. ಗುರಿ ಹಾಗೂ ಉದ್ದೇಶ ಅಲ್ಲಾಹನು ಮಾತ್ರನಾಗಿರುತ್ತಾನೆ.

ಇದಾಗಿದೆ. ಆ ಮಂತ್ರ ಈ ಮೂಲಕ ನಾವು ನಮ್ಮ ಶೈತಾನಗಳನ್ನು ಹೊಡೆದೋಡಿಸಬಹುದು. ಶೈತಾನನು ಹೊಡೆದೋಡಿಸಲು **ಲಾ ಹೌಲ ಇಲ್ಲಲ್ಲಾಹ್** ಪಠಿಸುತ್ತಿದ್ದರೆ ಪ್ರತಿ ಕ್ಷಣ ನಮ್ಮ ಹೃದಯಪಲ್ಲಟದಲ್ಲಿ ಈ ಮಾತು ಗಟ್ಟಿಯಾಗಿ ಹೊಕ್ಕಿರಬೇಕು. ಅಲ್ಲಾಹನು ಸರ್ವಶಕ್ತನೂ ಮತ್ತು ಸರ್ವಾಧಿಕಾರಿಯೂ ಆಗಿದ್ದಾನೆಂದು. ಒಂದು ಎಲೆಯು ಸಹ ಅವನ ಆಜ್ಞೆಯಿಲ್ಲದೆ ಅಲುಗಾಡುವುದಿಲ್ಲ. ಹೇಳಲಿಕ್ಕೆ ನಾವು ಇದನ್ನು ಯಾವಾಗಲೂ ಹೇಳುತ್ತಿರುತ್ತೇವೆ. ಅದೇ ನಮ್ಮ ಈಮಾನ್ ಆಗಿದೆ ಎಂದು. ಆದರೆ ಕೃತ್ಯರೂಪಕ್ಕೆ ಬರುವಾಗ ಬೇರೆ ಭಯಗಳು ಉದಾಹರಣೆಗೆ ಲೌಕಿಕ ಭಯಗಳು, ಪ್ರೇಮಗಳು ಮತ್ತು ಮಹತ್ವಾಕಾಂಕ್ಷೆಗಳು ಇವೆಲ್ಲ ಅಲ್ಲಾಹನ ಪ್ರೀತಿಯ ಮೇಲೆ ಮಹತ್ವ ಪಡೆಯುತ್ತದೆ.

ಆದುದರಿಂದ ನಿಜವಾದ ವಿಶ್ವಾಸ ಮತ್ತು ಅಲ್ಲಾಹನ ನಿಜವಾದ ಆರಾಧನೆ ಹೇಗಿರಬೇಕೆಂದರೆ ಅದರ ಪ್ರಭಾವ ನಮ್ಮ ಶರೀರ ಹಾಗೂ ಆತ್ಮ ಎರಡರ ಮೇಲೂ ಆಗಿರಬೇಕು. ಆರಾಧನೆಯ ಮಟ್ಟ ಹೀಗಿದ್ದರೆ, ನಮ್ಮ ಮೂಲವಾದ ನೈತಿಕತೆ ಉನ್ನತಮಟ್ಟಕ್ಕೆ ಉನ್ನತ ಪದವಿಗೆ ತಲುಪಿಸುತ್ತವೆ. ತನುಮನ ಪವಿತ್ರಗೊಳ್ಳುತ್ತದೆ. ಮನುಷ್ಯನು ಅಲ್ಲಾಹನ ಆಶ್ರಯಕ್ಕೆ ಒಳಗಾದರೆ ಶೈತಾನನ ದಾಳಿಯಿಂದ ಮತ್ತು ಅವನ ಎಲ್ಲ ಕುತಂತ್ರಗಳಿಂದ ರಕ್ಷಣೆ ಪಡೆಯುತ್ತಾನೆ. ಮನುಷ್ಯನಿಗೆ ಆರಾಧನೆಯ ಆ ಮಟ್ಟ ಲಭಿಸುತ್ತದೆ. ಅದರಲ್ಲಿ ಬಹುದೇವರ ಯಾವ ತರ್ಕವು ಇರುವುದಿಲ್ಲ. ನಮಾಝ್ ಆರಾಧನೆಯ ತಿರುಳಾಗಿದೆ ಎಂದು. ಒಂದು ಹದೀಸಿನಲ್ಲಿ ಬಂದಿದೆ. ಆದ್ದರಿಂದ ನಾವು ಈ ತಿರುಳನ್ನು ಗಳಿಸು ಪ್ರಯತ್ನಿಸುವಾಗ ನಮಾಝಿನ ಮತ್ತು ಆರಾಧನೆಯ ಹಕ್ಕನ್ನು ಈಡೇರಿಸಬೇಕಾಗಿದೆ. (ಮಲ್ಫೂಝಾತ್. ಸಂಪುಟ-7, ಪುಟ-367, ಸಂಚಿಕೆ 1984)

ಈ ಹಕ್ಕನ್ನು ಪಾಲಿಸಿದರೆ ಅಲ್ಲಾಹನ ಸಾಮಿಪ್ಯವನ್ನು ಗಳಿಸುವವರಾಗುವೆವು. ಆರಾಧನೆಯ ಹಕ್ಕನ್ನು ಪಾಲಿಸುವವರಾಗುವೆವು. ನಮಾಝಿನ ಹಕ್ಕನ್ನು ಈ ಹಕ್ಕನ್ನು ಪಾಲಿಸಿದರೆ ಅಲ್ಲಾಹನ ಸಾಮಿಪ್ಯವನ್ನು ಗಳಿಸುವವರಾಗುವೆವು. ಆರಾಧನೆಯ ಹಕ್ಕನ್ನು ಪಾಲಿಸುವವರಾಗುವೆವು. ನಮಾಝಿನ ಹಕ್ಕನ್ನು ಪಾಲಿಸುವವರಾಗುವೆವು. ತಮ್ಮ ಆತ್ಮ ಹಾಗೂ ಶರೀರದ ಮೇಲೂ ಒಂದು ಕ್ರಾಂತಿಯನ್ನು ಉಂಟುಮಾಡುವವರಾಗುವೆವು. ಇಲ್ಲದಿದ್ದರೆ ಬಾಹ್ಯವಾದ ನಮಾಝಿನಿಂದ ಯಾವುದೇ ಪ್ರಯೋಜನವಿಲ್ಲ. ವಿವೇಕಿಗಳಿಗೆ ನಮಾಝುಗಳನ್ನು ನಿರ್ವಹಿಸಿಕೊಂಡು ಅನಂತರ ದೌರ್ಜನ್ಯ ಮತ್ತು ಕ್ರೂರತೆಯಲ್ಲಿ ಮಿತಿಯಿಂದ ಅನೇಕ ನಮಾಝುಗಳು ಇರುವುದು. ಈ ಭಯೋತ್ಪಾದಕ ಸಂಸ್ಥೆಗಳು, ನಾಮ ಮಾತ್ರದ ಮೌಲ್ವಿಗಳು ಅಲ್ಲಾಹ್ ಮತ್ತು ಅವನ ಪ್ರವಾದಿಯು ಹೆಸರಿನ ಮೇಲೆ ಏನೆಲ್ಲ ಹಿಂಸೆಗಳನ್ನು ಹುಟ್ಟುಹಾಕುತ್ತಿದ್ದಾರೆ. ಇವರು ಲೋಕದ ಶಾಂತಿಯನ್ನೇ ಭಂಗಮಾಡಿಬಿಟ್ಟಿದ್ದಾರೆ. ಇವರು ಲೌಕಿಕವಾದಿಗಳಿಗಿಂತಲೂ ಹಿಂಸೆಯಲ್ಲಿ ಮೈಲುಗೈ ಪಡೆದಿರುವರು. ಅವರಾದರೂ ಲೌಕಿಕ, ರಾಜಕೀಯ ಉದ್ದೇಶಗಳಿಂದ ಹಿಂಸೆ ಮಾಡುತ್ತಿದ್ದಾರೆ. ಆದರೆ ಇವರು ದಯಾವಂತರಾದ, ಕರುಣಾನಿಧಿಯಾದ ಅಲ್ಲಾಹನ ಹೆಸರಿನ ಮೇಲೆ ಮತ್ತು ಅನುಗ್ರಹಿತ ಪ್ರವಾದಿಯ ಹೆಸರಿನ ಮೇಲೆ ಹಿಂಸೆ ಮಾಡುತ್ತಿದ್ದಾರೆ. ಆದ್ದರಿಂದ ಇವರ ನಮೂನೆಗಳಿಂದ ಪಾಠ ಕಲಿತು ಅಹ್ಮದಿಯರು ಇಸ್ಲಾಮಿನ ಶಿಕ್ಷಣದ ಉನ್ನತ ಮಾದರಿಗಳನ್ನು ಪಾಲಿಸುವವರಾಗಬೇಕಾಗಿದೆ. ನಮ್ಮ ನಮಾಝುಗಳು, ನಮ್ಮ ಆರಾಧನೆಗಳು ಮತ್ತು ದುಆಗಳು ಅಲ್ಲಾಹನ ಸಂಪ್ರೀತಿ ಪಡೆಯುವ ಉದ್ದೇಶ ಹೊಂದಿರಬೇಕಾಗಿದೆ. ಈ ಉದ್ದೇಶವನ್ನು ನಾವು ಸಾಧಿಸುವವರಾದರೆ ಹಝ್‌ರತ್ ಮಸೀಹ್ ಮೌಊದ್ (ಅ) ರವರ ಬೈಅತ್ತಿನ ಹಕ್ಕು ಪಾಲಿಸಿದಂತಾಗುವುದು ಮತ್ತು ರಂಝಾನಿನ ಅನುಗ್ರಹಗಳು ಪಡೆದಂತಾಗುವುದು.

ನಮ್ಮ ನಮಾಝುಗಳು ಹೇಗಿರಬೇಕು ಎಂಬುದರ ಬಗ್ಗೆ ಹಝ್‌ರತ್ ಮಸೀಹ್ ಮೌಊದ್ (ಅ) ಹೇಳುತ್ತಾರೆ. ನೆನಪಿಡಿರಿ, ನಮಾಝ್ ಎಂತಹ ಸಂಗತಿಯೆಂದರೆ, ಅದರಿಂದ ಸಕಲ ಕಷ್ಟತೆಗಳು ಸುಲಭವಾಗುತ್ತವೆ. ಎಲ್ಲ ವಿಪತ್ತುಗಳು ದೂರವಾಗುತ್ತವೆ. ಆದರೆ ನಮಾಝ್ ಎಂಬುದರ ಉದ್ದೇಶ ಸಾಮಾನ್ಯ ಜನರು ಸಂಪ್ರದಾಯದಂತೆ ನಿರ್ವಹಿಸುವ ನಮಾಝ್ ಅಲ್ಲ. ಬದಲಾಗಿ ಮನುಷ್ಯನ ಹೃದಯ ಮೃದುಗೊಳ್ಳುವಂತಹ ಮತ್ತು ಏಕದೇವನ ಸನ್ನಿಧಿಯಲ್ಲಿ ಬಿದ್ದುಕೊಂಡು ಲೀನವಾಗಿ ಕರಗಿ ಹೋಗುವಂತಹ ನಮಾಝನ್ನು ಉದ್ದೇಶಿಸಲಾಗಿದೆ. ಅಲ್ಲಾಹನಿಗೆ ನಮ್ಮ ನಮಾಝುಗಳ ಅವಶ್ಯಕತೆಯಿದೆ ಎಂದು ಭಾವಿಸಬೇಡಿರಿ. ನಾವು ನಮಾಝ್ ನಿರ್ವಹಿಸುತ್ತಿದ್ದರೆ ಅಥವಾ ಅದನ್ನು ಪಾಲಿಸುತ್ತಿದ್ದರೆ ಅದರರ್ಥ ಅಲ್ಲಾಹನಿಗೆ ನಮ್ಮ ಆರಾಧನೆಯ ಅವಶ್ಯಕತೆ ಇದೆ ಎಂದಲ್ಲ. ಅಲ್ಲಾಹನಿಗೆ ನಮ್ಮ ನಮಾಝುಗಳ ಯಾವ ಅವಶ್ಯಕತೆಯೂ ಇಲ್ಲ. ಅವನು ನಿರ್ಲಿಪ್ತನು, ಅವನಿಗೆ ಯಾವ ಅವಶ್ಯಕತೆಯೂ ಇಲ್ಲ. ಬದಲಿಗೆ ಅದರ ಅರ್ಥ ಮನುಷ್ಯನಿಗೆ ಅದರ ಅವಶ್ಯಕತೆ ಇದೆ. ಇದೊಂದು ರಹಸ್ಯದ ಮಾತಾಗಿದೆ, ಮನುಷ್ಯನು ಸ್ವಯಂ ತನ್ನ ಒಳಿತಿಗಾಗಿ ಇವೆಲ್ಲ ಮಾಡುತ್ತಿದ್ದಾನೆ. ಮನುಷ್ಯನು ತನ್ನ ಒಳಿತನ್ನು ಬಯಸುತ್ತಾನೆ, ಅದರ ವಾಸ್ತವ ಇದೇ ಆಗಿದೆ. ಅದಕ್ಕಾಗಿಯೇ ಅವರು ಅಲ್ಲಾಹನಿಂದ ಸಹಾಯ ಯಾಚಿಸುತ್ತಾನೆ. ತನ್ನ ಒಳಿತಿಗಾಗಿ ಅಲ್ಲಾಹನಿಂದ ಸಹಾಯ ಯಾಚಿಸುತ್ತಾನೆ. ಏಕೆಂದರೆ ಮನುಷ್ಯನು ಅಲ್ಲಾಹನೊಂದಿಗೆ ಸಂಬಂಧ ಹೊಂದುವುದರಲ್ಲಿಯೇ ಅವನ ಎಲ್ಲ ಹಿತ ಒಳಗೊಂಡಿರುತ್ತದೆ. ಇಂತಹ ವ್ಯಕ್ತಿಯ ಇಡೀ ಲೋಕವೇ ಶತ್ರುವಾದರೂ ಅವನ ವಿನಾಶ ಬಯಸಿದರೂ ಅವನನ್ನು ಏನೂ ಹಾನಿ ಮಾಡಲಾರರು. ಏಕೆಂದರೆ ಅಲ್ಲಾಹನು ಇಂತಹ ವ್ಯಕ್ತಿಗೋಸ್ಕರ ಲಕ್ಷೋಪ ಕೋಟಿಗಟ್ಟಲೇ ಜನರನ್ನು ನಾಶಪಡಿಸಬೇಕಾದರೆ ನಾಶಪಡಿಸುತ್ತಾನೆ. ಅವನೊಬ್ಬನಿಗೋಸ್ಕರ ಲಕ್ಷಾಂತರ ಜನರನ್ನು ವಿನಾಶಕ್ಕೆ ತಳ್ಳುತ್ತಾನೆ.

ಹೇಳಿದರು. ನೆನಪಿಡಿರಿ, ನಮಾಝ್ ಎಂತಹ ವಸ್ತುವಾಗಿದೆ ಎಂದರೆ ಅದರಿಂದ ಲೌಕಿಕತೆಯು ಸುಧಾರಿಸುತ್ತದೆ ಮತ್ತು ಧರ್ಮವು ಸಹ, ಮನುಷ್ಯನು ಅಲ್ಲಾಹನಿಗೋಸ್ಕರ ನಮಾಝ್ ನಿರ್ವಹಿಸುವವನಾದರೆ ಅವನ ಎರಡೂ ಲೋಕಗಳು ಸುಧಾರಿಸುತ್ತದೆ ಶರತ್ತೇನೆಂದರೆ ಅದರ ಹಕ್ಕನ್ನು ತಿಳಿದು ನಿರ್ವಹಿಸಬೇಕು. ಹೇಳಿದರು. ಹೆಚ್ಚಿನವರು ಹೇಗೆ ನಮಾಝ್ ನಿರ್ವಹಿಸುತ್ತಾರೆಂದರೆ, ನಮಾಝ್ ಅವರ ಮೇಲೆ ಶಾಪ ಹಾಕುತ್ತದೆ. (ಮಲ್ಫೂಝಾತ್, ಸಂಪುಟ-10, ಪುಟ-66, ಸಂಚಿಕೆ 1984)

ಅಲ್ಲಾಹನು ನಮಗೆ ನಮಾಝುಗಳ ಹಕ್ಕನ್ನು ಈಡೇರಿಸಲು ಸೌಭಾಗ್ಯ ನೀಡಲಿ. ಅಲ್ಲಾಹನು ಅಸುಂತುಷ್ಟಗೊಳಿಸುವಂತಹ ನಮ್ಮ ನಮಾಝುಗಳು ಆಗಿರಬಾರದು. ನಾವು ಅಲ್ಲಾಹನ ಅನುಗ್ರಹಗಳಿಗೆ ಪಾತ್ರರಾಗುವಂತಾಗಲಿ, ಅಲ್ಲಾಹನೊಂದಿಗೆ ಸಂಬಂಧವಿರಿಸಿ, ಅಲ್ಲಾಹನು ಹಝ್‌ರತ್ ಮಸೀಹ್ ಮೌಊದ್ (ಅ) ಅವರಿಗೆ ನೀಡಿದ ವಾಗ್ದಾನಗಳಿಗೆ ಭಾಗಿಯಾಗುವಂತಾಗಲಿ, ರಕ್ಷಣೆಯ ಖಾತರಿ ನೀಡುವಂತಹ ಆರಾಧನೆಗಳ ಅಭ್ಯಾಸವನ್ನು ನಾವು ನಮ್ಮ ಸಂತಾನಗಳಿಗೆ ಮತ್ತು ಮುಂದಿನ ಪೀಳಿಗೆಗೆ ನೀಡುವಂತಾಗಲಿ. ಹೀಗಾಗಿದ್ದಲ್ಲಿ ಹಝ್‌ರತ್ ಮಸೀಹ್ ಮೌಊದ್ (ಅ) ರವರ ಹೇಳಿಕೆಯ ಪ್ರಕಾರ, ಲೋಕದ ಯಾವ ದಜಲ್, ಶೈತಾನನ ಯಾವ ದಾಳಿಯು ನಮ್ಮ ಕೂದಲು ಸಹ ಕೊಂಕಿಸಲು ಸಾಧ್ಯವಾಗುವುದಿಲ್ಲ. ಲೋಕವು ಸಾವಿರ ಸಲ ನಮ್ಮ ವಿನಾಶಕ್ಕಾಗಿ ಯೋಜನೆ ಹಾಕಿಕೊಳ್ಳಲಿ, ನಮಗೆ ಯಾವ ಹಾನಿಯು ಮಾಡಲಾರರು, ಬದಲು ಹಝ್‌ರತ್ ಮಸೀಹ್ ಮೌಊದ್(ಅ) ಹೇಳಿದಂತೆ ಅಲ್ಲಾಹನು ತನ್ನ ದಾಸರ ಸಲುವಾಗಿ ಲಕ್ಷ ಕೋಟಿ ಜನರನ್ನು ವಿನಾಶಗೊಳಿಸುವನು. ಆದ್ದರಿಂದ ಅಲ್ಲಾಹನ ಪ್ರೀತಿ ಮತ್ತು ಅವನ ಸಂತೃಪ್ತಿ ಪಡೆಯಲು ತಮ್ಮ ಆರಾಧನೆಗಳ ಮಟ್ಟವನ್ನು ಉನ್ನತಿಕರಿಸಬೇಕಾಗಿದೆ. ದಜ್ಜಾಲ್ ಈ ಕಾಲಘಟ್ಟದಲ್ಲಿ ನಾಶವಾಗುವನು. ಇದು ಅಲ್ಲಾಹನ ಹಝ್‌ರತ್ ಮಸೀಹ್ ಮೌಊದ್ (ಅ) ಅವರಿಗೆ ನೀಡಿದ ವಾಗ್ದಾನವಾಗಿದೆ. ಅದರಲ್ಲಿ ಯಾವ ಸಂಶಯವೂ ಇಲ್ಲ.

ಹಝ್‌ರತ್ ಮಸೀಹ್ ಮೌಊದ್ (ಅ) ರ ಜಮಾಅತಿನಲ್ಲಿ ಸೇರ್ಪಡೆಗೊಳ್ಳುವ ಹಕ್ಕನ್ನು ಈಡೇರಿಸುವವರಾದರೆ ನಾವು ಸೌಭಾಗ್ಯಶಾಲಿಗಳು. ಈ ಹಕ್ಕನ್ನು ಈಡೇರಿಸಲು ಹಝ್‌ರತ್ ಮಸೀಹ್ ಮೌಊದ್(ಅ) ನೀಡಿರುವ ಒಂದು ಸಲಹೆ. ಈ ಪದವಿಯನ್ನು ಗಳಿಸಲಿಕ್ಕಾಗಿ ಹಝ್‌ರತ್ ಮಸೀಹ್ ಮೌಊದ್(ಅ) ಹೀಗೆ ಹೇಳುತ್ತಾರೆ. ನಿಮ್ಮ ದಿನ ಮತ್ತು ರಾತ್ರಿ ಒಟ್ಟಾರೆ ಹೇಳುವುದಾದರೆ, ಯಾವುದೇ ಘಳಿಗೆ ದುಆಗಳನ್ನು ಮಾಡದೇ ಇರುವ ಸ್ಥಿತಿ ಉಂಟಾಗಲಾರದು. (ಮಲ್ಫೂಝಾತ್, ಸಂಪುಟ-10, ಪುಟ-67, ಸಂಚಿಕೆ 1984)

ಈ ಸ್ಥಿತಿ ಉಂಟಾದಲ್ಲಿ ನಾವು ಅಲ್ಲಾಹನ ಅನುಗ್ರಹಗಳಿಗೆ ವಾರಸುದಾರರಾಗುವೆವು. ಶೈತಾನಿನ ಎಲ್ಲ ದಾಳಿಗಳಿಂದ, ದಜ್ಜಾಲಿನ ದಾಳಿಗಳನ್ನು ವಿಫಲಗೊಳಿಸುವೆವು. ಅಲ್ಲಾಹನು ನಮಗೆ ಸೌಭಾಗ್ಯ ನೀಡಲಿ. ನಾವು ತಮ್ಮ ಜೀವಿತಗಳನ್ನು ಅಲ್ಲಾಹ್ ಮತ್ತು ಅವನ ಪ್ರವಾದಿಯ ಶಿಕ್ಷಣದನ್ವಯ ಕಳೆಯುವ ಮತ್ತು ಹಝ್‌ರತ್ ಮಸೀಹ್ ಮಲೌಊದ್(ಅ)

ರವರ ಇಚ್ಛೆಯಂತೆ ತಮ್ಮ ಜೀವನ ನಡೆಸುವವರಾಗಿ ಅವರ ಬೈಅತ್ತಿನ ಹಕ್ಕನ್ನು ಪಾಲಿಸುವಂತಾಗಲಿ. ಅಲ್ಲಾಹನ ಸಂಪ್ರೀತಿಯೇ ನಮ್ಮ ಗುರಿಯಾಗಿರಬೇಕು. ನಾವು ಈ ಪ್ರತಿಜ್ಞೆಯನ್ನು ಮಾಡಬೇಕು. ನಾವು ತಮ್ಮೊಳಗೆ ಪವಿತ್ರವಾದ ಬದಲಾವಣೆ ಹೊಂದುವವರಿಗೆ ಮತ್ತು ತಮ್ಮ ಸ್ಥಿತಿಗಳನ್ನು ಅಲ್ಲಾಹನ ಪ್ರೀತಿಯ ಅನುಗುಣವಾಗಿ ಮಾಡುವವರಿಗೆ ವಿರಮಿಸುವೆವು. ಎಂದೂ ನಾವು ತಮ್ಮೊಳಗೆ ಮತ್ತು ತಮ್ಮ ಸಂತಾನ ಹಾಗೂ ಪೀಳಿಗೆಯ ಒಳಗೆ ಶೈತಾನನ್ನು ಹೊಕ್ಕಲು ಬಿಡೆವು. ಅದಕ್ಕಾಗಿ ಎಲ್ಲ ರೀತಿಯ ಪ್ರಯತ್ನಗಳನ್ನು ಮಾಡುವೆವು. ಅಲ್ಲಾಹನ ಮತ್ತು ಆತನ ಪ್ರವಾದಿಯ ಶಿಕ್ಷಣದಂತೆ ನಡೆಯುವೆವು. ಅಷ್ಟೇ ಅಲ್ಲ ಲೋಕವನ್ನು ಸಹ ಶೈತಾನ ಮತ್ತುದಜ್ಜಾಲಿನಿಂದ ಪವಿತ್ರಗೊಳಿಸುವ ಶತಪ್ರಯತ್ನ ಮಡುವೆವು. ಅಲಾಹನು ನಮಗೆ ಸೌಭಾಗ್ಯ ನೀಡಲಿ.

ಪಾಕಿಸ್ತಾನದ ಅಹ್ಮದಿಯರಿಗಾಗಿಯೂ ದುಆ ಮಾಡಿರಿ. ಅಲ್ಲಾಹನು ಅವರನ್ನು ದುಷ್ಟರ ಮತ್ತು ಎದುರಾಳಿಗಳ ಕೆಡುಕುಗಳಿಮದ ಸುರಕ್ಷಿತಗೊಳಿಸಲಿ. ದುಷ್ಟರ ದುಷ್ಟತನ ಅವರ ಮೇಲೆಯೇ ತಿರುಗಿ ಬೀಳುವಂತಾಗಲಿ. ಪಾಕಿಸ್ತಾನದಲ್ಲಿರುವ ಅಹ್ಮದಿಯರು ಕೂಡ ತಮಗಾಗಿ ವಿಶೇಷ ರೀತಿಯ ಕಾಳಜಿ ವಹಿಸಲು ದುಆ ಮಾಡಿರಿ. ಮೂರು ದಿನ ಅಥವಾ ನಾಲ್ಕು ದಿನ ಅಥವಾ ವಾರದ ದುಆಗಳಲ್ಲ. ಬದಲಾಗಿ ಸ್ಥಿರವಾಗಿ ದುಆ ಮಾಡಬೇಕು. ತಮ್ಮ ಜೀವಿತಗಳನ್ನು ಅಲ್ಲಾಹನ ಆಜ್ಞೆಗಳ ಪ್ರಕಾರ ನಡೆಯಲು ಪ್ರತಿಜ್ಞೆ ಮಾಡಬೇಕು.

ಬುರ್ಕಿನಾಫಾಸೋ, ಬಾಂಗ್ಲಾದೇಶ, ಅಲ್‌ಜೀರಿಯ ಮತ್ತು ಲೋಕದ ಪ್ರತಿಯೊಂದು ದೇಶದ ಅಹ್ಮದಿಯರಿಗಾಗಿ ದುಆ ಮಾಡಿರಿ. ಅಲ್ಲಾಹನು ಪ್ರತಿಯೊಬ್ಬ ಅಹ್ಮದಿಯನ್ನು ಶತ್ರುಗಳ ತೊಂದರೆಗಳಿಂದ ಸಂರಕ್ಷಿಸಲಿ. ಮತ್ತು ಅವರ ನಂಬಿಕೆ ವಿಶ್ವಾಸವನ್ನು ಸದೃಢಗೊಳಿಸಲಿ.

ಅಲ್ಲಾಹನು ನಮಗೆ ನಮ್ಮೊಳಗೆ ಪರಿಶುದ್ಧ ಬದಲಾವಣೆ ಉಂಟು ಮಾಡಲು ಮತ್ತು ದುಆಗಳನ್ನು ಮಾಡಲು ಸೌಭಾಗ್ಯ ನೀಡಲಿ. ಆ ದುಆಗಳನ್ನು ಅಲ್ಲಾಹನು ದುಆ ಸ್ವೀಕಾರ ಮಾಡಲಿ. **ಆಮೀನ್**

*************

## ಅಲ್ಲಾಹನು ಪವಿತ್ರ ಖುರ್‌ಆನ್‌ನ ರಕ್ಷಕನಾಗಿದ್ದಾನೆ.

**(ಪವಿತ್ರ ಖುರ್‌ಆನ್‌ನ 26 ವಚನಗಳ ಕುರಿತು ಎತ್ತಿದ ಆಕ್ಷೇಪದ ಉತ್ತರ)**

**ಮುಹಮ್ಮದ್ ಹಮೀದ್ ಕೌಸರ್,**
**ನಾಝಿರ್ ದಾವತ್ ಇಲಲ್ಲಾಹ್ ಉತ್ತರ ಭಾರತ, ಖಾದಿಯಾನ್.**

### ಭಾಗ–1

ಪವಿತ್ರ ಖುರ್‌ಆನ್ ಅಂತ್ಯ ದಿನದವರೆಗೂ ಅಲ್ಲಾಹನ ಗ್ರಂಥವಾಗಿದೆ ಎಂಬುದು ಈ ಭೂಮಂಡಲದಲ್ಲಿ ವಾಸಿಸುತ್ತಿರುವ ಕೋಟ್ಯಾಂತರ ಮುಸ್ಲಿಮರ ದೃಢವಾದ ವಿಶ್ವಾಸ ಆಗಿದೆ. ಅದು ಅವತರಿಸಿದ ದಿನದಿಂದಲೇ ಅಲ್ಲಾಹನು ಅದನ್ನು ತನ್ನ ರಕ್ಷಣೆಯಲ್ಲಿ ಇರಿಸಿಕೊಂಡಿದ್ದಾನೆ ಮತ್ತು ಅಂತ್ಯ ದಿನದವರೆಗೂ ಸಂರಕ್ಷಿಸುವನು. ಹಿಂದಿನ ಹದಿನಾಲ್ಕು ಶತಮಾನಗಳಿಂದ ಶೈತಾನ ಶಕ್ತಿಗಳು, ಅಧರ್ಮಿಗಳು ಈ ದೇವಗ್ರಂಥ ಕುರಿತು ನೂರಾರು ಸಲ ತಮ್ಮ ಆತಂಕ ಶಂಕೆಗಳನ್ನು ವ್ಯಕ್ತಪಡಿಸುತ್ತ ಬಂದಿದ್ದಾರೆ. ಅದು ಇಲ್ಲಿಯವರೆಗೂ ಜಾರಿಯಲ್ಲಿದೆ. ಸಧ್ಯದಲ್ಲೇ ಲಕ್ನೌ ನಿವಾಸಿಯಾದ ವಸೀಮ್ ರಿಜ್ವಿ ಹೆಸರಿನ ಓರ್ವ ವ್ಯಕ್ತಿ ಭಾರತದ ಉಚ್ಚ ನ್ಯಾಯಾಲಯದಲ್ಲಿ (Supreme Court) ಒಂದು ಅರ್ಜಿಯನ್ನು ಸಲ್ಲಿಸಿದರು. ಆ ಮೂಲಕ 26 ಖುರ್‌ಆನ್‌ನ ವಚನಗಳನ್ನು ತೆಗೆದುಹಾಕಲು ಕೋರಿದರು. ಅವರ ಅನಿಸಿಕೆ ಪ್ರಕಾರ ಈ ವಚನಗಳು ಭಯೋತ್ಪಾದನೆ ಹಾಗೂ ಉಗ್ರವಾದದ ಶಿಕ್ಷಣವಾಗಿದೆ. ಇದು ಯುವಕರಿಗೆ ಭಯೋತ್ಪಾದ ಕೃತ್ಯ ನಡೆಸಲು ಇಂಬು ನೀಡುತ್ತಿದೆ. ಅವರ ಹೇಳಿಕೆಯ ಪ್ರಕಾರ ಈ ವಚನಗಳು ಹಝ್ರತ್ ಮುಹಮ್ಮದ್(ಸ) ರವರ ಜೀವಿತ ಅವಧಿಯಲ್ಲಿ ಖುರ್‌ಆನ್‌ನ ಭಾಗ ಆಗಿರಲಿಲ್ಲ. ಬದಲು ಖಲೀಫ ರಾಶಿದೀನ್‌ನ ಮೊದಲ ಮೂರು ಖಲೀಫರುಗಳು ಅವುಗಳನ್ನು ಪವಿತ್ರ ಖುರ್‌ಆನ್‌ನಲ್ಲಿ ಸೇರಿಸಿದ್ದಾರೆ.

ಅಲ್ಹಮ್ದುಲಿಲ್ಲಾಹ್ ದಿನಾಂಕ: 12 ಏಪ್ರಿಲ್ 2021 ರಂದು ಉಚ್ಚ ನ್ಯಾಯಾಲಯ ಸದರಿ ಅರ್ಜಿಯನ್ನು ವಜಾಗೊಳಿಸಿತು ಮತ್ತು ಆ ಬಗ್ಗೆ ತನ್ನ ಅಸಂತೋಷ ವ್ಯಕ್ತಪಡಿಸುತ್ತ 50 ಸಾವಿರ ರೂಪಾಯಿಗಳ ದಂಡ ಹಾಕಿತು. ಆದ್ದರಿಂದ ಆ ಬಗ್ಗೆ ದಿನಪತ್ರಿಕೆಯಾದ ಹಿಂದ್ ಸಮಾಚಾರ್‌ನ ದಿನಾಂಕ: 13 ಏಪ್ರಿಲ್ 2021 ರಂದು ಹೀಗೆ ಸುದ್ದಿ ಪ್ರಕಟಿಸಿತು.

ನವದೆಹಲಿ: 12 ಏಪ್ರಿಲ್ (UNI) ಉಚ್ಚ ನ್ಯಾಯಾಲಯವು ಸೋಮವಾರದಂದು ಪವಿತ್ರ ಖುರ್‌ಆನ್‌ನ 26 ವಚನಗಳನ್ನು ತೆಗೆಯಬೇಕೆಂಬ ಅರ್ಜಿಯು ವಜಾ ಮಾಡಿತು. ಜಸ್ಟಿಸ್ ಕೋಹಲಿಗ್ಟನ್ ಸ್ಮಾಲಿ ನಶೀಮನ್‌ರವರ ಉಸ್ತುವಾರಿಯ ಬೆಂಚ್ ಉತ್ತರಪ್ರದೇಶ ಶಿಯಾ ವಕ್ಫ್ ಬೋರ್ಡ್‌ನ ಮಾಜಿ ಚೇರ್‌ಮನ್ ವಸೀಮ್ ರಿಜ್ವಿರವರ ಅರ್ಜಿ ವಜಾಗೊಳಿಸಿತು. ಮತ್ತು ಅವರ ಮೇಲೆ 50,000/– ರೂಪಾಯಿಗಳ ದಂಡ ಹಾಕಿತು. ಜಸ್ಟಿಸ್ ನಾರಿಮನ್ ಹೇಳಿದರು. ಇದು ಸಂಪೂರ್ಣ ಬೇಜವಾಬ್ದಾರಿಯ ರಿಟ್ ಪಿಟಿಷನ್ ಆಗಿದೆ. ಕೇಸ್ ಆಲಿಸುವ ಮಧ್ಯೆ ಜಸ್ಟಿಸ್ ನಾರಿಮನ್ ಕೇಳಿದರು. ಅರ್ಜಿದಾರನು ಈ ಅರ್ಜಿಯ ಮೇಲೆ ವಿವೇಕ ಹೊಂದಿದ್ದಾನೆಯೇ? ಅವರು ಹೇಳಿದರು. ನೀವು ಅರ್ಜಿಯನ್ನು ಆಲಿಸಲು ಒತ್ತಾಯಿಸುವರೆ? ನೀವು ನಿಜವಾಗಿಯೂ ವಿವೇಕ ಹೊಂದಿರುವಿರೋ?

ಪವಿತ್ರ ಖುರ್‌ಆನ್‌ನ ವಿರುದ್ಧ ಆಲಾಪಿಸುವ ವಸೀಮ್ ರಿಜ್ವಿಯ ಪರ ವಕೀಲರಾದ Senior Advocate ಆರ್.ಕೆ ರಾಯ್‌ರವರ ವಾದ ಉತ್ತರ ನೀಡಿದರು. ಅವರು ಶಾಲಾ ಶಿಕ್ಷಣದ ಅನುಶಾಸನಕ್ಕೆ ಸೀಮಿತವಾಗಿ ತನ್ನ ಅರ್ಜಿ ಸೀಮಿತಗೊಳಿಸುತ್ತಿದ್ದಾರೆ. ಅನಂತರ ಅವರು ತಮ್ಮ ಕಕ್ಷಿದಾರನ ಅಭಿಪ್ರಾಯ ಮಂಡಿಸಿದರು. ಅದಕ್ಕೆ ಬೆಂಚ್ ತೃಪ್ತನಾಗಿಲ್ಲ ಮತ್ತು 50 ಸಾವಿರ ರೂಪಾಯಿಗಳ ದಂಡವನ್ನು ಹಾಕುವ ಮೂಲಕ ಅರ್ಜಿ ವಜಾಗೊಳಿಸಿದರು.

ಗಮನವಿರಲಿ ರಿಜ್ವಿ ಅರ್ಜಿಯಲ್ಲಿ ಹೇಳಿದ್ದನು. ಈ ವಚನಗಳಲ್ಲಿ ಮಾನವೀಯತೆಯ ಮೂಲಭೂತ ಸಿದ್ಧಾಂತಗಳನ್ನು ಕಡೆಗಣಿಸಲಾಗಿದೆ. ಮತ್ತು ಅದು ಧರ್ಮದ ಹೆಸರಿನಲ್ಲಿ ದ್ವೇಷ, ಹತ್ಯೆ, ರಕ್ತಪಾತ ಹರಿಸುವಂತಿದೆ. ಅದಲ್ಲದೇ ಅದರ ಜೊತೆಯಲಿಲ ಈ ವಚನಗಳು ಭಯೋತ್ಪಾದನೆಗೆ ಇಂಬು ನೀಡುವಂತಿದೆ. ರಿಜ್ವಿಯ ಅಂಬೋಣ ಹೀಗೂ ಇತ್ತು. ಈ ಖುರ್‌ಆನ್‌ನ ವಚನಗಳನ್ನು ಶಾಲೆಗಳಲ್ಲಿ ಮಕ್ಕಳಿಗೆ ಬೋಧಿಸಲಾಗುತ್ತಿದೆ. ಅದು ಅದರಲ್ಲಿ ಕಟ್ಟರವಾದ ಬೆಳೆಸುತ್ತದೆ. ಖುರ್‌ಆನ್‌ನ ಈ 26 ವಚನಗಳಲ್ಲಿ ಹಿಂಸೆಯ ಶಿಕ್ಷಣ ನೀಡಲಾಗಿದೆ. ಭಯೋತ್ಪಾದನೆಗೆ ಇಂಬು ನೀಡುವಂತ ಇಂಥ ಶಿಕ್ಷಣವನ್ನು ತಡೆಯಬೇಕಾಗಿದೆ. (ಹಿಂದ್ ಸಮಾಚಾರ್, ಜಾಲಂಧರ್, ಪಂಜಾಬ್ ದಿನಾಂಕ: 13, ಏಪ್ರಿಲ್ 2021, ಪುಟ 1, 2)

ಅಲ್ಹಮ್ದುಲಿಲ್ಲಾಹ್ 26 ವಚನಗಳನ್ನು ತೆಗೆಯಲಿರುವ ಅರ್ಜಿಯು ವಜಾಗೊಂಡಿತು. ಆದರೆ ಅರ್ಜಿದಾರನು ಮತ್ತು ಅವನ ಸಂಗಡಿಗರು ಸದರಿ ವಚನಗಳನ್ನು ಬುಖಾರಿಯ ಕೆಲ ಹದೀಸುಗಳ ಮಾಧ್ಯಮವಾಗಿ ಪವಿತ್ರ ಖುರ್‌ಆನ್‌ನ ಕುರಿತು ಗೊಂದಲ ಆ ಶಂಕೆಗಳನ್ನು ಮಾಧ್ಯಮಗಳ ಮೂಲಕ ಹಚ್ಚು ಹಾಕಲು ಪ್ರಯತ್ನ ಮಾಡಿದರು. ಅದರಿಂದ ಕೆಲ ಅಮುಸ್ಲಿಮರ ವಿಚಾರದಲ್ಲಿ ಈ ಪ್ರಶ್ನೆ ಮಾಡುವಂತಾಯಿತು.

1) ಮುಸಲ್ಮಾನನಾದವನೆ ಖುರ್‌ಆನ್‌ನ ಕೆಲವು ಆಯತ್ತಿನ ರದ್ದು ಹಾಗೂ ಬದಲಾವಣೆಯ ಆರೋಪ ಮಾಡಿದ್ದಾನೆ ಎಂದರೆ ಯಥಾರ್ಥತೆ ಏನಿರಬಹುದು?

2) ಎರಡನೆಯದಾಗಿ ಮುಸ್ಲಿಮರ ಹೊಸ ಪೀಳಿಗೆಯು ಮುಸಲ್ಮಾನರು ಅರ್ಜಿದಾರನು ಮಾಡಿದ ಆರೋಪಗಳ ಉತ್ತರವನ್ನು ಬಯಸುತ್ತವೆ. ಆ ಮೂಲಕ ಅವರು ಸ್ವಯಂ ತೃಪ್ತಿ ಹೊಂದಿದವರಿಗೆ ತಮ್ಮ ಅಮುಸ್ಲಿಮ್ ಮಿತ್ರರಿಗೂ ಪವಿತ್ರ ಖುರ್‌ಆನ್‌ನ ಸತ್ಯತೆಯನ್ನು ಮನವರಿಕೆ ಮಾಡಿಕೊಡಬಹುದು.

ಸದರಿ ಕಾರಣಗಳಿಗಾಗಿ ವಸೀಮ್ ರಿಜ್ವಿ ಬರೆದ ಆರೋಪಗಳಿಗೆ ಉತ್ತರಗಳನ್ನು ಬರೆಯಲಾಗಿದೆ. ಈ ಉತ್ತರಗಳು ಮುಸಲ್ಮಾನರಿಗೆ ಮತ್ತು ಅನ್ಯಧರ್ಮಗಳ ಸಜ್ಜನ ಮಿತ್ರರ ಹೃದಯಗಳಲ್ಲಿ ಮೂಡಿದ ಆತಂಕಗಳು ದೂರವಾಗಲಿ ಎಂದು ಅಲ್ಲಾಹನೊಡನೆ ಪ್ರಾರ್ಥಿಸುತ್ತೇನೆ ಆಮೀನ್. ಅಲ್ಲದೇ ಅಲ್ಲಾಹನು ಪವಿತ್ರ ಖುರ್‌ಆನ್‌ನ ಬಗ್ಗೆ ಅವರ ವಿಶ್ವಾಸ ನಂಬಿದವರಲ್ಲಿ ಇನ್ನಷ್ಟು ದೃಢತೆ ನೀಡಲಿ ಆಮೀನ್.

### ಆಕ್ಷೇಪ–1

ರಸೂಲುಲ್ಲಾಹ್(ಸ) 632 ರಲ್ಲಿ ನಿಧನಗೊಂಡರು. ಅಲ್ಲಾಹನು ಅವರಿಗೆ ಮಾನವೀಯತೆಗೋಸ್ಕರ ಒಂದು ಸಂದೇಶವನ್ನು ನೀಡಿದ್ದನು. ಈ ಖುರ್‌ಆನ್ ಅವರ ಜೀವನದಲ್ಲಿ ತಯಾರಾಗಲಿಲ್ಲ. ಬದಲು ಅವರ ಅಗಲಿಕೆಯ ನಂತರ ತಯಾರಾಗಿದೆ.

### ಉತ್ತರ

ಈ ಲೋಕವನ್ನು ಸೃಷ್ಟಿಸಿದ ಸೃಷ್ಟಿಕರ್ತನು ಸಯ್ಯಿದ್‌ನಾ ಮುಹಮ್ಮದ್(ಸ) ರವರ ಮೇಲೆ ಸುಮಾರು 23 ವರ್ಷಗಳ ಅವಧಿಯಲ್ಲಿ ಪವಿತ್ರ ಖುರ್‌ಆನ್ನು ಇಳಿಸಿದ್ದಾನೆ ಎಂದು ಪ್ರತಿಯೊಬ್ಬ ಸತ್ಯಸಂಧಕ ಮತ್ತು ನೈಜ ಮುಸಲ್ಮಾನನು ಚೆನ್ನಾಗಿ ಬಲ್ಲವನಾಗಿದ್ದಾನೆ ಮತ್ತು ಧೃಢವಾದ ವಿಶ್ವಾಸ ಹೊಂದಿದ್ದಾನೆ. ಅದನ್ನು ಇಳಿಸಿದ ಅಲ್ಲಾಹನೇ ಅದೇ ಖುರ್‌ಆನ್‌ನಲ್ಲಿ ಘಂಟಾಘೋಷವಾಗಿ ಅಂತ್ಯ ತೀರ್ಮಾನ ದಿನದವರೆಗೆ ಈ ವಚನವನ್ನು ನೀಡಿದ್ದಾನೆ.

(1) **ಇನ್ನಾ ನಹನು ನಝ್ಝುಲ್‌ನಝ್ಝುಕ್‌ರ ವ ಇನ್ನಾ ಲಹೂ ಲಹಾಫಿಝೂನ್** (ಸೂರಃ ಅಲ್‌ಹಿಜ್ರ್ –ವಚನ 10)

ಅನುವಾದ: ದಿಟವಾಗಿಯೂ ನಾವೇ ಈ ಉಪದೇಶವನ್ನು ಅವತೀರ್ಣಗೊಳಿಸಿದ್ದು, ಖಂಡಿತವಾಗಿಯೂ ನಾವೇ ಅದನ್ನು ಸಂರಕ್ಷಿಸುವೆವು. ಈ ಪವಿತ್ರ ವಚನದಲ್ಲಿ ಅಲ್ಲಾಹನು ವಾಗ್ದಾನ ನೀಡಿರುವನು. ನಾವೇ ಪವಿತ್ರ ಖುರ್‌ಆನ್‌ನ್ನು ಅವತರಣಗೊಳಿಸಿದ್ದು ಮತ್ತು ನಾವೇ ಅದನ್ನು ಸಂರಕ್ಷಿಸುವೆವು. ಭೂಮಿಯಲ್ಲಿ ನೆಲೆಸುವ ಯಾವ ಮನುಷ್ಯನಿಗೆ ಅದರಲ್ಲಿ ಹೆಚ್ಚು ಕಡಿಮೆ ಮಾಡುವ ಶಕ್ತಿ ಇಲ್ಲ. ಈ ವಾಗ್ದಾನದಿಂದ ತಿಳಿದುಬರುವುದೇನೆಂದರೆ ಯಾರಾದರೂ ತಿದ್ದುಪಡಿ ಮಾಡುವ ಸಾಹಸಕ್ಕೆ ಕೈ ಹಾಕಿದರೆ ಆ ಸರ್ವಶಕ್ತನಾದ ಅಲ್ಲಾಹನು ಖಂಡಿತವಾಗಿಯೂ ಹಾಗೆ ಮಾಡಲು ಬಿಡಲಾರನು ಅದಕ್ಕೆ ಹಿಂದಿನ 14 ಶತಮಾನಗಳೇ ಸಾಕ್ಷ್ಯವಾಗಿದೆ.

**ಪವಿತ್ರ ಖುರ್‌ಆನ್ ಅವತರಣ ಮತ್ತು ಅದರ ಕ್ರೋಡೀಕರಣದ ಇತಿಹಾಸ**

ಒಂದು ಅಂದಾಜಿನ ಪ್ರಕಾರ ಪವಿತ್ರ ಖುರ್‌ಆನ್‌ನ ಅವತರಿಕೆ 24ನೇ ರಂಝಾನ್ (20 ಆಗಸ್ಟ್ 610) ರಂದು ಪ್ರಾರಂಭಗೊಂಡಿತು. ಹಝ್ರತ್ ಮುಹಮ್ಮದ್(ಸ) ರವರು 1 ರಬಿಉಲ್ ಅವ್ವಲ್, 11 ಹಿಜರಿ, 26 ಮೇ 632 ರವರೆಗೆ ನಿಧನಗೊಳ್ಳುವವರೆಗೂ ವಿವಿಧ ಸಮಯಗಳಲ್ಲಿ ಅವತರಿಸುತ್ತ ಇತ್ತು. ಈ ಲೆಕ್ಕದಿಂದ ಅವರ ನುಬುಅತ್ತಿನ ದಿನಗಳು ಸುಮಾರು 7 ಸಾವಿರ ಒಂಬೈನೂರ ಎಪ್ಪತ್ತು (7970) ಆಗುತ್ತವೆ. ಪವಿತ್ರ ಖುರ್‌ಆನ್‌ನ ಒಟ್ಟು ಪದಗಳ ಸಂಖ್ಯೆ: (77924) ಆಗುತ್ತವೆ. ಅದರನ್ವಯ ದಿನನಿತ್ಯ ಅವತರಿಕೆಯು ಸರಾಸರಿ ಅಂದಾಜು 9 ಶಬ್ದಗಳಾಗುತ್ತವೆ. ಇತಿಹಾಸದಿಂದ ತಿಳಿದುಬರುವುದೇನೆಂದರೆ ಕೆಲ ಸಂದರ್ಭಗಳಲ್ಲಿ ಕಡಿಮೆ. ಹಝ್ರತ್ ರಸೂಲುಲ್ಲಾಹ್(ಸ) ರವರು ಎಷ್ಟೇ ವಚನಗಳು ಅವತರಣಗೊಂಡರೂ ತಕ್ಷಣ ಸಹಾಬರಿಗೆ (ಶಿಷ್ಯಂದರಿಗೆ) ಕಂಠಸ್ಥ ಮಾಡಿಸಿ ಬಿಡುತ್ತಿದ್ದರು. ಖುರ್‌ಆನ್ ಅವತರಣಗೊಂಡ ಪ್ರಾರಂಭದಿಂದಲೇ ಹಝ್ರತ್ ಜಿಬ್ರೀಲ್ ಸಯ್ಯದ್‌ನಾ ಹಝ್ರತ್ ಮುಹಮ್ಮದ್(ಸ) ರವರ ಬಳಿಯಿಂದ ಅವರಿಗೆ ಅವತರಣಗೊಂಡ ವಚನಗಳು ಕಂಠಸ್ಥ ಆಗುವವರೆಗೆ ಮರಳುತ್ತಿರಲಿಲ್ಲ. ಜಿಬ್ರೀಲ್ ಹೋದನಂತರ ಅವರು ತಮ್ಮ ಸಹಾಬರ ಬಳಿಗೆ ಬರುತ್ತಿದ್ದರು. ಹಾಗೂ ಅವತರಣಗೊಂಡ ವಚನಗಳನ್ನು ತಕ್ಷಣ ಕಂಠಸ್ಥ ಮಾಡಿಸುತ್ತಿದ್ದರು. ಹೀಗೆ ಪ್ರಾರಂಭದಿಂದಲೇ ಪವಿತ್ರ ಖುರ್‌ಆನ್‌ನ ಸಹಾಬರ ಕಂಠಸ್ಥಿಕೆ ಮೂಲಕ ಸಹಾಬರ ಎದೆಯಲ್ಲಿ ಸಂರಕ್ಷಿತವಾಗುತ್ತಿತ್ತು. ಸಹಾಬರ ಎದೆಯಲ್ಲಿ ಸುರಕ್ಷಿತಗೊಂಡ ಪವಿತ್ರ ಖುರ್‌ಆನ್ ಅವರ ಅನುಯಾಯಿಗಳಿಗೆ, ಅವರಿಂದ ಅವರ ಅನುಯಾಯಿಗಳಿಗೆ ಹೀಗೆ ಒಂದು ಎದೆಗಯಿಂದ ಇನ್ನೊಂದು ಎದೆಯಲ್ಲಿ ಸುರಕ್ಷಿತಗೊಳ್ಳುತ್ತ ಹೋಯಿತು. ಅದೇ ಪವಿತ್ರ ಖುರ್‌ಆನ್ ಪೀಳಿಗೆಯಿಂದ ಪೀಳಿಗೆಗೆ ಎದೆಯಿಂದ ಎದೆಗೆ ಇಲ್ಲಿಯವರೆಗೆ ಮುಸಲ್ಮಾನರ ಕಂಠದಲ್ಲಿ ಸುರಕ್ಷಿತವಾಗಿದೆ. ಹೀಗೆ ಪೀಳಿಗೆ ನಂತರ ಇನ್ನೊಂದು ಪೀಳಿಗೆಗೆ ವರ್ಗಾವಣೆಯಾಗುತ್ತು ಇದೆ. ಇಸ್ಲಾಮಿನ ಇತಿಹಾಸ ಪ್ರಕಾರ ಸಯ್ಯದ್‌ನಾ ಮುಹಮ್ಮದ್(ಸ) ಅವರು ತಮ್ಮ ಪವಿತ್ರ ಜೀವಿತದಲ್ಲಿ ಅಂತಿಮ ಹಜ್ಜ್ ನೆರವೇರಿಸುವ ಸಂಧರ್ಭ ಹೇಳಿದರು. ಅದರಲ್ಲಿ ಸುಮಾರು (1,24,000) ಸಹಾಬರು ಹಾಜರಿದ್ದರು. ಅದೊಂದು ಸಹಜ ಹಾಗೂ ದೈವಿಕ ಮಾತಿತ್ತು. ಅವರಲ್ಲಿ ಒಂದು ದೊಡ್ಡ ಸಂಖ್ಯೆ ಪವಿತ್ರ ಖುರ್‌ಆನ್ ಕಂಠಸ್ತ ಮಾಡಿದವರದ್ದಾಗಿತ್ತು. ಅವರ ಎದೆಗಳಲ್ಲಿ ಪವಿತ್ರ ಖುರ್‌ಆನ್ ಸುರಕ್ಷಿತವಾಗಿತ್ತು. ಅದಲ್ಲದೇ ಮತ್ತೆ ಪವಿತ್ರ ರಂಝಾನ್‌ನಲ್ಲಿ ತರಾವೀಹ್ ನಮಾಝಿನ ಸ್ಮರಣೆ ಪ್ರಾರಂಭವಾಯಿತು. ಪವಿತ್ರ ರಂಝಾನ್‌ನಲ್ಲಿ ದೊಡ್ಡ ದೊಡ್ಡ ಮಸೀದಿಗಳಲ್ಲಿ ಸಂಪೂರ್ಣ ಪವಿತ್ರ ಖುರ್‌ಆನ್ ಹಾಫಿಝ್ (ಇಮಾಮ್) ದೊಡ್ಡ ಧ್ವನಿಯಲ್ಲಿ ಪವಿತ್ರ ಖುರ್‌ಆನ್ ಪಠಿಸುತ್ತಿದ್ದರು. ಇನ್ನೊಬ್ಬ ಹಾಫಿಝ್ ಹಿಂದೆ ನಿಂತುಕೊಳ್ಳುತ್ತಿದ್ದ, ಆಕಸ್ಮಾತ್ತಾಗಿ ಏನಾದರೂ ಮರೆತರೆ ಅವನು ಹೇಳಿಕೊಡುತ್ತಿದ್ದನು. ತರಾವೀಹ್ ನಮಾಝಿನ ಈ ಸ್ಮರಣೆ ಇಂಡೋನೇಷಿಯಾದಿಂದ ಚೀನಾ ಮತ್ತು ಆಫ್ರಿಕಾ, ಯೂರೋಪ್, ಮತ್ತು ಅಮೇರಿಕಾ ಉಪಖಂಡ, ಇಂಡೋ ಪಾಕ್ ಮತ್ತು ಅರಬ್‌ಗಳಲ್ಲಿ ಜಾರಿಯಲ್ಲಿತ್ತು. ಎದೆಯಿಂದ ಎದೆಗೆ ಸುರಕ್ಷಿತವಿದ್ದ ಪವಿತ್ರ ಖುರ್‌ಆನ್‌ನ ಪಠಣದಲ್ಲಿ ವ್ಯತ್ಯಾಸ ಕಂಡುಬಂದಿಲ್ಲ. ಅದು ಅಲ್ಲಾಹನ ವಾಗ್ದಾನದ ಬಹುದೊಡ್ಡ ಸಾಕ್ಷ್ಯಕ್ಕೆ ಸತ್ಯಕ್ಕೆ ಕಾರಣವಾಗಿದೆ. ಹಿಂದಿನ ಹದಿನಾಲ್ಕು ಶತಮಾನಗಳಿಂದ ಪವಿತ್ರ ಖುರ್‌ಆನ್ ಎದೆಯಿಂದ ಎದೆಗೆ ಪೀಳಿಗೆಯಿಂದ ಪೀಳಿಗೆಗೆ ಅತಿ ಉತ್ತಮ ರೀತಿಯಲ್ಲಿ ಸುರಕ್ಷಿತವಾಗಿ ವರ್ಗಾವಣೆಯಾಗುತ್ತಿದೆ. ಲೋಕದಲ್ಲಿ ಎಲ್ಲೂ ಯಾವ ಗ್ರಂಥಕ್ಕೂ ಇಂತಹ ಉದಾಹರಣೆ ದೊರೆಯದು. ಸುರಕ್ಷತೆಯ ಈ ಅಚ್ಚುಕಟ್ಟಿನ ವ್ಯವಸ್ಥೆಯನ್ನು ಕಡೆಗಣಿಸಿ ಆರೋಪ ಮಾಡುವುದು ಮೂರ್ಖತನದ ಪರಮಾವಧಿಯಾಗಿದೆ.

**ಪವಿತ್ರ ಖುರ್‌ಆನ್ ಸುರಕ್ಷತೆಗಿರುವ ಎರಡನೆಯ ವಿಧಾನ:**

ಹಝ್ರತ್ ರಸೂಲುಲ್ಲಾಹ್(ಸ) ರವರು ಪವಿತ್ರ ಖುರ್‌ಆನ್ ವಚನಗಳು ಅವತರಣ ಗೊಳ್ಳುತ್ತಿದ್ದಂತೆಯೇ ಅದನ್ನು ಜೊತೆ ಜೊತೆಯಲ್ಲಿಯೇ ಬರೆಸುತ್ತಿದ್ದರು. ಅಲ್ಲಾಹನ ಇಂಗಿತದನ್ವಯ ಕ್ರಮಾನುಸಾರ ಖುದ್ದಾಗಿ ನಿಗದಿಪಡಿಸುತ್ತಿದ್ದರು. ಈ ಬಗ್ಗೆ ಹಲವು ಹದೀಸುಗಳಿವೆ. ಅವುಗಳಲ್ಲಿ ಕೆಲವು ಉದಾಹರಣೆ ರೂಪದಲ್ಲಿ ಈ ಕೆಳಗೆ ಪ್ರಸ್ತುತಪಡಿಸಲಾಗುತ್ತಿದೆ.

ಅನ್‌ಇಬ್ಬನು ಅಬ್ಬಾಸ್....... (ತಿರ್ಮಿದಿ, ಅಬೂದಾವೂದ್ ಮತ್ತು ಮುಸ್ನದ್ ಅಹ್ಮದ್, ಉಲ್ಲೇಖ ಅಬ್ವಾಬ್ ಫಝಾಎಲುಲ್ ಖುರ್‌ಆನ್)

ಅನುವಾದ; ಹಝ್ರತ್ ಇಬ್ನು ಅಬ್ಬಾಸ್ ಅವರು ಹಝ್ರತ್ ರಸೂಲುಲ್ಲಾಹ್(ಸ) ರವರ ಸಹೋದರ ಸಂಬಂಧಿಯಾಗಿದ್ದರು. ಅವರು ವರದಿ ಮಾಡುತ್ತಾರೆ. ಹಝ್ರತ್ ಉಸ್ಮಾನ್ ತೃತೀಯ ಖಲೀಫರು (ಅವರು ಹಝ್ರತ್ ರಸೂಲುಲ್ಲಾಹ್ ಅವರ ಕಾಲಘಟ್ಟದಲ್ಲಿ ಅವತರಣಗೊಂಡ ವಚನಗಳನ್ನು ಬರಹರೂಪಕ್ಕೆ ತರುತ್ತಿದ್ದರು) ಹೇಳುತ್ತಾರೆ. ಹಝ್ರತ್ ರಸೂಲುಲ್ಲಾಹ್(ಸ) ರವರ ಮೇಲೆ ಕೆಲ ವಚನಗಳು ಅವತರಣಗೊಂಡಾಗ ಅವರು ತಮ್ಮ ಬರಹಗಾರರಲ್ಲಿ ಒಬ್ಬರಿಗೆ ಈ ವಚನಗಳನ್ನು ಆಯಾ ಅಧ್ಯಾಯದಲ್ಲಿ ಇಂತಹ ಸ್ಥಳದಲ್ಲಿ ಬರೆಯಿರಿ ಎಂದು ಹೇಳುತ್ತಿದ್ದರು. ಒಂದೇ ಒಂದು ವಚನ ಅವತರಣ ಗೊಂಡರೂ ಮತ್ತೆ ಅದೇ ರೀತಿ ದೇವವಾಣಿಯ ಬರಹಗಾರರನ್ನು ಕರೆದು ಸ್ಥಳ ತೋರಿಸಿ ಅದನ್ನು ಬರೆಯಲು ಹೇಳುತ್ತಿದ್ದರು.

ಯಾವ ಸಹಾಬರು ದೇವವಾಣಿ ಬರೆಯುವ ಕಾರ್ಯ ಕೈಗೊಳ್ಳುತ್ತಿದ್ದರೋ ಅವರ ಹೆಸರುಗಳು ಮತ್ತು ಗಟಣೆಯ ವಿವರಗಳು ಇತಿಹಾಸದಲ್ಲಿ ಸುರಕ್ಷಿತಗೊಂಡಿದೆ. ಅವರಲ್ಲಿ ಹೆಚ್ಚಿನ ಹೆಸರು ಪಡೆದವರು ನಿಕಟವರ್ತಿ ಸಹಾಬರಾಗಿದ್ದರು. ಹಝ್ರತ್ ಅಬೂಬಕರ್, ಹಝ್ರತ್ ಉಮರ್, ಹಝ್ರತ್ ಉಸ್ಮಾನ್, ಹಝ್ರತ್ ಅಲಿ, ಹಝ್ರತ್ ಝುಬೇರ್ ಬಿನ್ ಅನಾಮ್, ಹಝ್ರತ್ ಅಬಿ ಬಿನ್ ಕಅಬ್ ಮತ್ತು ಹಝ್ರತ್ ಝೈದ್ ಬಿನ್ ನಾಬಿತ್.(ಫತಹಲ್ ಬಾರಿ ಸಂಪುಟ–9, ಪುಟ–19, ವಝ್ರಖಾನಿ, ಸಂಪುಟ–4, ಪುಟ–311–326)

ಈ ಪಟ್ಟಿಯಿಂದ ತಿಳಿದುಬರುವುದೇನೆಂದರೆ, ಹಝ್ರತ್ ರಸೂಲುಲ್ಲಾಹ್(ಸ) ರವರಿಗೆ ಪ್ರಾರಂಭದಿಂದಲೇ ಒಂದು ಆದರಣೀಯ ಜಮಾಅತ್ (ಸಮೂಹ) (ಖುರ್‌ಆನ್‌ನ) ದೇವವಾಣಿ ಬರೆಯಲು ಸಿದ್ಧವಾಗಿತ್ತು. ಹೀಗೆ ಪವಿತ್ರ ಖುರ್‌ಆನ್ ಅವತರಣದ ಜೊತೆ ಜೊತೆಯಲ್ಲೇ ಕೇವಲ ಬರಹ ರೂಪದಲ್ಲಿ ಮಾತ್ರವಲ್ಲದೆ ಜೊತೆ ಜೊತೆಯಲ್ಲೇ ಆದರ ಪ್ರಸ್ತುತ ಕ್ರಮವೂ ಕೆಲವು ಯುಕ್ತಿಯ ಕಾರಣಗಳಿಂದ ಅವತರಣ ಕ್ರಮದಿಂದ ಬೇರ್ಪಡಿಸಲಾಗಿತ್ತು. ಸ್ಥಾಪನೆಯಾಯಿತು. ಹಝ್ರತ್ ರಸೂಲುಲ್ಲಾಹ್(ಸ) ರವರ ನಿಧನದ ನಂತರ ಪವಿತ್ರ ಖುರ್‌ಆನ್‌ನ ಅವತರಣಿಕೆ ಸಂಪೂರ್ಣ ಮುಗಿದು ಹೋಗಿತ್ತು. ಪ್ರಥಮ ಖಲಿಫರಾದ ಹಝ್ರತ್ ಅಬೂಬಕರ್‌ರವರು, ಹಝ್ರತ್ ಉಮರ್ ಅವರ ಸಲಹೆಯ ಮೇರೆಗೆ ಹಝ್ರತ್ ರಸೂಲುಲ್ಲಾಹ್(ಸ) ರವರ ದೇವವಾಣಿಯ ಬರಹಗಾರರಾಗಿದ್ದ ಹಝ್ರತ್ ಝೈದ್ ಬಿನ್ ಸಾವಿತ್ ಅನ್ಸಾರಿ ಅವರಿಗೆ ಪವಿತ್ರ ಖುರ್‌ಆನ್‌ನ್ನು ಕ್ರಮಬದ್ಧವಾಗಿ ಒಂದು ಗ್ರಂಥದ ರೂಪದಲ್ಲಿ ಏಕತ್ರಗೊಳಿಸಿ ಸುರಕ್ಷಿತಗೊಳಿಸಲು ಆಜ್ಞೆ ಮಾಡಿದರು. ಅಂದಹಾಗೆ ಝೈದ್ ಬಿನ್ ಸಾಬಿತ್ ತುಂಬಾ ಶ್ರಮವಹಿಸಿ ಪ್ರತಿಯೊಂದು ವಚನದ ಬಗ್ಗೆ ಮೌಖಿಕವಾಗಿ ಹಾಗೂ ಬರಹ ರೂಪದಲ್ಲಿ ಎರಡೂ ರೀತಿಯ ಬಲ್ಲ ಸಾಕ್ಷ್ಯಗಳನ್ನು ಪಡೆದು ಅದನ್ನು ಒಂದು ಕ್ರಮಬದ್ಧವಾಗಿ ಗ್ರಂಥದ ರೂಪದಲ್ಲಿ ಏಕತ್ರಗೊಳಿಸಿದರು.( ಬ ು ಖ ಾ ರಿ ಕಿತಾಬ್ ಫಝಾಮಲ್ ಖುರ್‌ಆನ್, ಬಾಬ್ ಕಿತಾಬುನ್ನಬಿ)

ಅನಂತರ ಇಸ್ಲಾಂ ಧರ್ಮವು ವಿಭಿನ್ನ ದೇಶಗಳಲ್ಲಿ ಹರಡಿದಾಗ ಮತ್ತೆ ಹಝ್ರತ್ ಉಸ್ಮಾನ್ ತೃತಿಯ ಖಲಿಫರ ಆಜ್ಞೆಯಂತೆ ಝೈದ್ ಬಿನ್ ಸಾಬಿತ್ ಏಕತ್ರಗೊಳಿಸಿದ ಗ್ರಂಥದಂತೆ ಪವಿತ್ರ ಖುರ್‌ಆನ್‌ನ ಹಲವು ಅಧಿಕೃತ ಗ್ರಂಥಗಳನ್ನು ಬರೆಸಿ ಎಲ್ಲ ಇಸ್ಲಾಮಿ ರಾಷ್ಟ್ರಗಳಿಗೆ ಕಳುಹಿಸಿಕೊಟ್ಟರು. (ಬಹವಾಲ ಬುಖಾರಿ.)

ಸುರಕ್ಷತೆಯ ಈ ಎರಡನೆಯ ವಿಧಾನ ನಂತರ ಆಕ್ಷೇಪಗಾರನ ಆಕ್ಷೇಪ ಮಿಥ್ಯ ಮತ್ತು ಆಧಾರರಹಿತ ಎಂಬುದು ಬಟ್ಟ ಬಯಲಾಗುತ್ತದೆ. ಅದಾಗ್ಯೂ ಪವಿತ್ರ ಖುರ್‌ಆನ್ ನಂತರ ಮಾಡಲ್ಪಟ್ಟಿತು ಎಂಬ ವಾದ ಹುರುಳಿಲ್ಲದ್ದು, ಆಶ್ಚರ್ಯಕರ ಮತ್ತು ಅವರ ಅಲ್ಪಜ್ಞಾನಕ್ಕೆ ಸಾಕ್ಷ್ಯವಾಗಿದೆ. ಆಕ್ಷೇಪಗಾರನು ತಿಳಿದುಕೊಳ್ಳಬೇಕು, ಕಿತಾಬ್ ಎಂಬ ಪದ (ಕತಬ, ಯಕ್‌ತುಬು, ಕಿತಾಬನ್) ಯಿಂದ ಆಯ್ದುಕೊಳ್ಳಲಾಗಿದೆ. ಅಲ್ಲಾಹನು ಅಲ್‌ಬಖರ ಪ್ರಾರಂಭಿಕ ಅಧ್ಯಾಯದಲ್ಲಿಯೇ ಪ್ರತಿಯೊಬ್ಬ ಓದುಗನಿಗೆ ಈ ಸುವಾರ್ತೆ ನೀಡಿದೆ. "ಝಾಲಿಕಲ್ ಕಿತಾಬು" ಅದು ಪರಿಪೂರ್ಣ ಗ್ರಂಥ ಎಂದು ಸಂಬೋಧಿಸಲಾಗಿದೆ. ಆಕ್ಷೇಪ ಮಾಡುವವನು ಕಿತಾಬು ಪದದ

ಮೇಲೆ ಗಮನವಹಿಸಬೇಕು. ಈ ಗ್ರಂಥ ಸಯ್ಯದ್‌ನಾ ಮುಹಮ್ಮದ್(ಸ) ರವರ ಪವಿತ್ರ ಕಾಲಘಟ್ಟದಲ್ಲಿ ಇರುತ್ತಿರಲಿಲ್ಲ ಎಂದಾದರೆ ಆ ಸಮಯಕ್ಕೆ ಹಾಜರಿದ್ದ ಕಪಟ ವಿಶ್ವಾಸಿಗಳು ಮತ್ತು ವಿರೋಧಿಗಳು ಈ ಪ್ರಶ್ನೆಯನ್ನು ಎತ್ತಬಹುದಾಗಿತ್ತು. ಯಾವುದನ್ನು ನೀವು ದೈವಗ್ರಂಥ ಎನ್ನುತ್ತೀರಿ. ಅದು ಎಲ್ಲಿದೆ? ಅದು ಗ್ರಂಥರೂಪದಲ್ಲಿ ನಾವು ಕಾಣುತ್ತಿಲ್ಲ? ಅವರ ಮೌನದಿಂದ ಸ್ಪಷ್ಟವಾಗುವುದೇನೆಂದರೆ ಆ ಸಮಯದಲ್ಲೇ ಅಧಿಕೃತ ರೀತಿಯಲ್ಲಿ ಪವಿತ್ರ ಖುರ್‌ಆನ್ ಬರಹರೂಪದಲ್ಲಿ ಇತ್ತು. ಅದಲ್ಲದೇ ಅದರ ಮೇಲೆ ಅಲ್ಲಾಹನು ಸ್ಪಷ್ಟಪಡಿಸಿದನು. ಲಾ ರೈಬ ಫೀಹಿ ಈ ಗ್ರಂಥದ ಸಂದೇಹವೇನೂ ಇಲ್ಲ. ಸಂದೇಹಕ್ಕೆ ಅಸ್ಪದ ಇಲ್ಲ. ಸಂದೇಹದ ಭಯವು ಇಲ್ಲ. ಓ ಖುರ್‌ಆನ್ ಪಠಿಸುವವರೆ ಪೂರ್ಣ ದೃಢತೆಯಿಂದ ವಿಶ್ವಾಸದಿಂದ ಪಠಿಸು ಮತ್ತು ಅದರ ಅಧ್ಯಯನ ಮಾಡು. ಬರಬಹುದಾದ ಆಕ್ಷೇಪಗಳೆಲ್ಲ ಅಲ್ಲಾಹನು ಪ್ರಾರಂಭದ ಎರಡು ಪದಗಳಿಂದಲೇ ಅದನ್ನು ನಿವಾರಿಸಿಬಿಟ್ಟನು.

**(ಶೇಷ)**

*(ಪುಟ ಸಂಖ್ಯೆ 12ರ ಉಳಿದ ಭಾಗ)*

ಮತ್ತು 37 ಸದಸ್ಯರು ಮಹಿಳೆಯರಿದ್ದಾರೆ. ಈ 83 ಸಂಖ್ಯೆಯಲ್ಲಿ 35 ಜನರು P.H.D. ಮಾಡಿದವರಾಗಿದ್ದಾರೆ. ಹಾಗೂ ಅಹ್ಮದಿ ಮಹಿಳಾ ವಿಜ್ಞಾನಿಗಳ ಸಂಘದ ಅಧ್ಯಕ್ಷೆ ಡಾ. ನುಸ್ರತ್ ಶರೀಫ್ ಸಾಹಿಬ, ಫಾಯಿರುಝುರ್ (Pzizor) ನಲ್ಲಿ Fhermastical center ನ ವಿಜ್ಞಾನ ಪ್ರಾಂಶುಪಾಲರಾಗಿದ್ದಾರೆ.

ಪುರುಷ ಹಾಗೂ ಮಹಿಳಾ ಸಂಘದ ಸಂಯುಕ್ತ Vision ಬಗ್ಗೆ ತಿಳಿಸಿದರು. ನಾವು ಅಹ್ಮದಿಯಾ ಖಲೀಫರ ಅಬಿಲಾಷೆಗಳಂತೆ 100 ಪ್ರೋಫೆಸರ್ ಸೃಷ್ಟಿಸುವ ಗುರಿ ಹೊಂದಿದ್ದೇವೆ. ತಮ್ಮ ಈ ಪ್ರಯತ್ನವನ್ನು ಮುಂದುವರೆಸುತ್ತಾ ಡಾ. ನುಸ್ರತ್ ಸಾಹಿಬ್ ಎರಡೂ ಸಂಘಗಳ Official membership ನ ಪ್ರಸಕ್ತ Demographic data ಪ್ರಸ್ತುತಪಡಿಸಿ ಹೇಳಿದರು. ಕನಿಷ್ಠ ಹತ್ತು "ಅಬ್ದುಸ್ಸಲಾಂ" ಅರ್ಹತೆಯ ಅಭ್ಯರ್ಥಿಗಳು ಉಪಸ್ಥಿತರಿದ್ದಾರೆ.

ಆಗ ಹುಝೂರ್ ಅನ್ವರ್(ಅಬಿಅ) ಹೇಳಿದರು. ಹಝ್ರತ್ ಖಲೀಫತುಲ್ ಮಸೀಹ್ ತೃತೀಯ ಈ ಅಭಿಲಾಷೆಯನ್ನು ವ್ಯಕ್ತಪಡಿಸಿದ್ದರು. ಜಮಾಅತಿನ ಈ ಶತಮಾನದ ಒಳಗೆ ನಮ್ಮ ಬಳಿ ಇಂತಹ ವಿಜ್ಞಾನಿಗಳು ಇರಬೇಕಾಗಿದೆ. 1989 ರಿಂದ ಇಲ್ಲಿಯವರೆಗೆ 33 ವರ್ಷಗಳು ಸಂದಿವೆ. ಹುಝೂರೆ ಅನ್ವರ್ ಹೇಳಿದರು. ಮುಂದಿನ ಕೆಲವೇ ವರ್ಷಗಳಲ್ಲಿ ಕನಿಷ್ಠಪಕ್ಷ ಒಬ್ಬರು ಅಥವಾ ಇಬ್ಬರು ಅಬ್ದುಸ್ಸಲಾಂ ಆಗಬೇಕಾಗಿದೆ.

ಅನಂತರ ಕೆಳಗೆ ನಮೂದಿತ ಅಹ್ಮದಿ ವಿದ್ವಾಂಸರು ಸಂಕ್ಷಿಪ್ತವಾಗಿ ತಮ್ಮ ಸಂಶೋಧನಾ ವರದಿಯನ್ನು ಹುಝೂರೆ ಅನ್ವರ್ ಅವರ ಮುಂದೆ ಪ್ರಸ್ತುತಪಡಿಸಿದರು. ಮೊದಲು ಡಾ. ಅತ್‌ಹರ್ ನವೀದ್ ಮಲಿಕ್ ಸಾಹಿಬ್, ತಮ್ಮ Research ಮುಂದಿಟ್ಟರು. ಅವರು M.D. P.H.D. ಬ್ರೌನ್ ವಿಶ್ವವಿದ್ಯಾಲಯ ನಲ್ಲಿ Neomo surgery ಮತ್ತು Neono science ನ ಸಹಾಯಕ ಪ್ರೋಫೆಸರ್ ಆಗಿದ್ದಾರೆ. ಅವರು coma ಮತ್ತು ಮಿದುಳಿಗೆ ಸಂಬಂಧಿಸಿದ ರೋಗಗಳಲ್ಲಿ ಒಂದು ಅಸಾಮಾನ್ಯ ರೀತಿಯ ಫಲಕಾರಿ ಪರಿಣಾಮ ತರುವ ತನ್ನ ಸಂಶೋಧನೆಯ ಬಗ್ಗೆ ಹೇಳಿದರು. ಆಗ ಹುಝೂರೆ ಅನ್ವರ್ ಈ ಬಗ್ಗೆ ವಿಚಾರಿಸಿದಾಗ ಹೇಳಿದರು. ಇನ್ನೂ ಸಂಶೋಧನೆ ಜಾರಿಯಲ್ಲಿದೆ.

ಅದಾದ ನಂತರ ಡಾ. ಆಸಿಫ್ ಜಮೀಲ್ ಸಾಹಿಬ್ ಅವರು ತಮ್ಮ ಸಂಶೋಧನ ವರದಿ ನೀಡಿದರು. ಅವರು ಸಹ ಪಿ.ಹೆಚ್.ಡಿ ಆಗಿದ್ದಾರೆ. ಮತ್ತು ಹಾರ್‌ವರ್ಡ್ ಮೆಡಿಕಲ್ ಕಾಲೇಜಿನಲ್ಲಿ Instructor ಆಗಿದ್ದಾರೆ. ಅವರು ಮಾನಸಿಕ ಕಾಯಿಲೆಗಳ ಕಾರಣಗಳ ತಂತ್ರಗಳು (Brain stimulation Devices) ಯಿಂದ ನರಗಳ ಮತ್ತು ಮಾನಸಿಕ ಚಿಕಿತ್ಸೆಗಳ ಬಗ್ಗೆ ತಮ್ಮ ಸಂಶೋಧನೆ ಮುಂದಿಟ್ಟು ಹೇಳಿದರು. ಈ ಸಂಶೋಧನೆ ಇನ್ನು ಜಾರಿಯಲ್ಲಿದೆ.

ಅನಂತರ ಡಾ. ಅಬ್ದುನ್ನಸೀರ್ ಸಾಹಿಬ್ ತಮ್ಮ ಸಂಶೋಧನೆ ಬಗ್ಗೆ ತಿಳಿಸಿದರು. ಅವರು ಪಿ.ಹೆಚ್.ಡಿ ಆಗಿದ್ದಾರೆ ಮತ್ತು ಆಗಸ್ತಾ ವಿಶ್ವವಿದ್ಯಾಲಯದಲ್ಲಿ ಭೌತಶಾಸ್ತ್ರದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿದ್ದಾರೆ. ಅವರು ತಿಳಿಸಿದರು. ಅವರು ಶರೀರದ ಎಲ್ಲ Cells ಗಳ ಬಗ್ಗೆ ವಿಶೇಷವಗಿ Cancer ನ cell ನ ಚಲನವಲನಗಳ ಹಿಂದಿನ ಮೂಲಭೂತ ಭೌತಿಕ ಕಾರಣಗಳನ್ನು ತಿಳಿಸಲು ಸಂಶೋಧನೆ ಮಾಡುತ್ತಿದ್ದಾರೆ. ಅವರ ಈ ಸಂಶೋಧನೆ ಈಗಾಗಲೇ ಲೋಕದ ಭೌತಿಕ ವಿಜ್ಞಾನದ ವಿಶೇಷ ಪತ್ರಿಕೆಯಲ್ಲಿ ಪ್ರಕಟಗೊಂಡಿದೆ. ಅವರ ಶೀರ್ಷಿಕೆ "ವಸ್ತುವಿನ ಸ್ವರೂಪ," ಎಂದಾಗಿದೆ.

ಅನಂತರ ಡಾ. ಫೈಝಾನ್ ಅಬ್ದುಲ್ಲ ಬಾಗ್ವರ್ ಸಾಹಿಬ್ ಅವರು M.D. P.HD. North Western University ಯ ಪ್ರೋಫೆಸರ್ ಮತ್ತು Chief of Pediatric surgery ಹಾಗೂ North wstern university shicago ನಲ್ಲಿ Canter for Globel surgery ಯ Director ಆಗಿದ್ದಾರೆ. ಅವರು ತಮ್ಮ ಸಂಶೋಧನೆಯ ಬಗ್ಗೆ ತಿಳಿಸುತ್ತ ಹೇಳಿದರು. ಅವರು ಮಕ್ಕಳಲ್ಲಿ (cour next energy) ಯ ಚೀಫ್ ಎಕ್ಸಿಕ್ಯೂಟಿವ್ ಅಧಿಕಾರಿ (CEO) ಆಗಿದ್ದಾರೆ. ಅವರು ತಮ್ಮ ಕಂಪನಿಯ Electric natlery Technology ಯ ಬಗ್ಗೆ ತಿಳಿಸಿದರು. ಅದು Electric ಮೋಟಾರುಗಳಿಗೆ ಒಂದು ಸಾವಿರ ಕಿ.ಮೀ ಪ್ರಮಾಣದಲ್ಲಿ ಒಂದೇ ಸಲದ ಚಾರ್ಜ್‌ನ ಸಹಾಯ ಒದಗಿಸಿಕೊಡುತ್ತಿತ್ತು.

ಅನಂತರ ಅದೀಲ್ ಮಲಿಕ್ ಸಾಹಿಬ್ ಅವರು Clear steping ನ Chief executive officer (CEO) ಆಗಿದ್ದರು. ಅವರು ಹೇಳಿದರು. ಅಗತ್ಯ ಉಳ್ಳವರ ಉಸ್ತುವಾರಿ ಸಲುವಾಗಿ Artificial intelligence ಬಳಸುತ್ತಿದ್ದಾರೆ ಮತ್ತು ಈ ಪೈಕಿ ಸಂಶೋಧನೆ ಮಾಡುತ್ತಿದ್ದಾರೆ.

ಅನಂತರ ಮಹಿಳಾ ವಿಜ್ಞಾನಿಗಳ ಪರವಾಗಿ ಡಾ. ಶಹ್ನಾಝ್ ಬಟ್ ಸಾಹಿಬ್ ನಮ್ಮ ಸಂಶೋಧನೆಯ ಕುರಿತು ಹೇಳಿದರು. ಅವರು P.H.D. ಆಗಿದ್ದಾರೆ. ಸೆಂಟ್ ಜೋಸೆಫ್ ವಿಶ್ವವಿದ್ಯಾನಿಲಯದಲ್ಲಿ ಪ್ರೋಫೆಸರ್ ಆಗಿದ್ದಾರೆ ಮತ್ತು ಅದೇ ವಿಶ್ವವಿದ್ಯಾನಿಲಯದಲ್ಲಿ (Neuropsyche phraamodology lab, Director ಅಗಿದ್ದಾರೆ. ಅವರು ತಿಳಿಸಿದರು. ವಿವಿಧ ರೀತಿಯ ಮಾನಸಿಕ ರೋಗಗಳೆಲ್ಲ (Psychlogical Director) ನಾನಾ ಬಗೆಯ ಅಧ್ಯಯನ ನಡೆಸಲು ವಿವಿಧ ವೈಜ್ಞಾನಿಕ Model ಬಳಸುತ್ತಿದ್ದಾರೆ.

ಅನಂತರ ಓಲ್ವಿಯ ವಿಲಿಯಮ್ಸ್ ಬಾರ್ಬರ್ ಅವರು North Western University, Shicago ದಲ್ಲಿ ಪಿ.ಹೆಚ್.ಡಿ ಯ ಅಭ್ಯರ್ಥಿಯಾಗಿದ್ದಾರೆ. ಅವರು ತಮ್ಮ ಸಂಶೋಧನೆ ಪ್ರಕಾರ ಮನೆಯಲ್ಲಿರುವ ಕ್ರಿಮಿ ಜಂತುಗಳ ಮೇಲೆ Spraying disinfetant ಮಾಡುವುದರಿಂದ Antibiotic Assistant Bacteria ಸಮಸ್ಯೆ ಉದ್ಭವವಾಗುತ್ತದೆ ಎಂದು ತಿಳಿಸಿದರು.

ಅನಂತರ ನಾಯಿಲ ರಜಾಕ್ ಸಾಹಿಬಾ ಅವರು Yale ವಿಶ್ವವಿದ್ಯಾನಿಲಯದಲ್ಲಿ Early medieramean Religions ನಲ್ಲಿ P.H.D. ಅಭ್ಯರ್ಥಿಯಾಗಿದ್ದಾರೆ. ಅವರು ಹೇಳಿದರು. ಇಸ್ಲಾಮ್ ಧರ್ಮದ ಪ್ರಾರಂಭದಲ್ಲಿ ಫೆಸಿಫಿಕ್ ಸಮುದ್ರದ ಕ್ಷೇತ್ರಗಳ ಅಧ್ಯಯನ ಮಾಡಲು Archology ಯ ಹೊಸ ಹೊಸ ವಿಧಾನಗಳನ್ನು ಬಳಕೆ ಮಾಡಬಹುದಾಗಿದೆ.

ಹುಝೂರ್ ಅನ್ವರ್(ಅಬಿಅ) ಅವರು ವಿಶೇಷವಾಗಿ ಆ ಸಂಶೋಧಕರಿಂದ ಅವರ ಕಾರ್ಯಗಳ ಫಲಿತಾಂಶದ ಬಗ್ಗೆ ಮತ್ತು ಸಮಾಜದ ಮೇಲೆ ಅದರಿಂದ ಆಗುವ ಪರಿಣಾಮಗಳ ಬಗ್ಗೆ ವಿಚಾರಿಸಿದರು.

ಕೊನೆಯಲ್ಲಿ ಸಂಘದವರು ಹುಝೂರೆ ಅನ್ವರ್ ಅವರಿಗೆ ಒಂದು ಆಸ್ಟ್ರೋ ಲ್ಯಾಬ್ ನೀಡಿದರು. ಅದು ಹಿಂದಿನ ಕಾಲಗಳಲ್ಲಿ ಖಗೋಳ ಮಾಪನಕ್ಕೆ ಬಳಸುತ್ತಿದ್ದ ಉಪಕರಣಗಳಾಗಿದ್ದವು. ಇದನ್ನು ಆರಂಭಿಕ ಮುಸ್ಲಿಂ ವಿಜ್ಞಾನಿಗಳು ಕಂಡುಹಿಡಿದಿದ್ದರು.

ಈ ಕಾರ್ಯಕ್ರಮವು ಬೆಳಿಗ್ಗೆ 8.05 ರವರೆಗೆ ಮುಂದುವರೆಯಿತು. ನಂತರ 8:30 ಕ್ಕೆ ಹುಝೂರೆ ಅನ್ವರ್ ಮಗ್ರಿಬ್ ಮತ್ತು ಇಶಾ ಪ್ರಾರ್ಥನೆಗಳನ್ನು ಒಟ್ಟಿಗೆ ನಿರ್ವಹಿಸಿಕೊಟ್ಟರು ಪ್ರಾರ್ಥನೆಯ ನಂತರ ಹುಝೂರೆ ಅನ್ವರ್ (ಅಬಿಅ) ತಮ್ಮ ವಸತಿ ನಿಲಯಕ್ಕೆ ತೆರಳಿದರು.

**30 ಸೆಪ್ಟೆಂಬರ್ ಶುಕ್ರವಾರ**

ಹುಝೂರ್ ಅನ್ವರ್(ಅಬಿಅ) ಮುಂಜಾನೆ 5:50 ಕ್ಕೆ ಮಸ್ಜಿದ್ ಫತಹ ಅಝೀಮ್ ಆಗಮಿಸಿ ಫಜರ್ ನಮಾಝ್ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ತಮ್ಮ ವಸತಿನಿಲಯಕ್ಕೆ ತೆರಳಿದರು.

ಮುಂಜಾನೆ ಹುಝೂರ್ ಅನ್ವರ್(ಅಬಿಅ) ಕಚೇರಿಯ ಅಂಚೆಗಳನ್ನು ಪರಿಶೀಲಿಸಿದರು ಮತ್ತು ನಿರ್ದೇಶನಗಳನ್ನು ನೀಡಿದರು. ಹೀಗೆ ಹುಝೂರೆ ಅನ್ವರ್ ಕಚೇರಿ ಕಾರ್ಯಗಳಲ್ಲಿ ತಲ್ಲೀನರಾಗಿದ್ದರು.

ಇಂದು ಪವಿತ್ರ ಜುಮುಅ ದಿನವಾಗಿತ್ತು. ಇಂದಿನ ಈ ದಿವಸವು ಹಲವು ವಿಧದಲ್ಲಿ ಒಂದು ಐತಿಹಾಸಿಕ ದಿನವಾಗಿತ್ತು. ಅದು ಅಹ್ಮದಿಅತ್ ಇತಿಹಾಸದಲ್ಲಿ ಅವಿಸ್ಮರಣೀಯವಾಗಿ ಉಳಿಯುವುದು. ಇಂದು ಹುಝೂರೆ ಅನ್ವರ್ ಅವರ ಖುತುಬ ಜುಮುಅ ಅಲ್ಲದೇ ಡಾ॥ ಅಲೆಕ್ಸಂಡರ್ ಡೂಮಿಯ zion ನಗರದಲ್ಲಿ ಮಸ್ಜಿದ್ ಫತಿಹ ಅಝೀಮ್‌ನ ಉದ್ಘಾಟನೆ ಆಗಬೇಕಿತ್ತು. ಅದಲ್ಲದೆ ಇದು ಈ ನಾಡಿನಲ್ಲಿ ಖಲೀಫತುಲ್ ಮಸೀಹ್ ಒಬ್ಬರ MTA International ಮೂಲಕ ಇಡೀ ಲೋಕದಲ್ಲಿ ನೇರ ಪ್ರಸಾರವಾಗುವ ಪ್ರಥಮ ಕುತುಬ ಜುಮುಅ ಆಗಿತ್ತು.

ಇದಕ್ಕಿಂತ ಮುಂಚೆ ಅಮೇರಿಕಾದ ಪೂರ್ವಭಾಗ ವಾಷಿಂಗ್‌ಟನ್

D.C. Harrisbury ಮತ್ತು ದಕ್ಷಿಣ ಕ್ಷೇತ್ರದ ಹ್ಯೂಸ್ಟನ್ ಮತ್ತು ಪಶ್ಚಿಮ ಕ್ಷೇತ್ರದ ಲಾಸ್‌ಏಂಜಲೀಸ್ ಇಂದ ಹುಝೂರೆ ಅನ್ವರ್ ಅವರ ಜುಮುಅ ಕುತುಬಗಳು MTA ಮೇಲೆ ಪ್ರಸಾರಗೊಂಡಿದೆ.

ಡಾ॥ ಡೂಯಿ ಹೇಳಿದರು. ನಾನು ನಿರ್ಮಿಸಿದ zion ನಗರದಿಂದ ಇಸ್ಲಾಂ ಧರ್ಮದ ಧ್ವನಿಯನ್ನು ಅಡಗಿಸಿಬಿಡುವೆನು. ಇಸ್ಲಾಂ ಧರ್ಮದ ಹೆಸರು ಸಹ ಹೇಳುವವರು ಯಾರೂ ಇರಲಿಕ್ಕಿಲ್ಲ.

ಇಂದು ಅಲ್ಲಾಹನ ಅನುಗ್ರಹದಿಂದ ಹಝ್ರತ್ ಅಖ್‌ದಸ್ ಮಸೀಹ್ ಮೌಊದ್(ಅ) ರವರ ಖಲೀಫರ ನಾಲಿಗೆಯಿಂದ ದೇವವಾಣಿ (ಇಲ್‌ಹಾಮ್) ಫತಹ ಅಝೀಮ್ ನಿಂದ, ಕೇವಲ ಡೂಯಿ ನಗರದಲ್ಲಿ ಮಾತ್ರ ಇಸ್ಲಾಮಿನ ಧ್ವನಿ ಮೊಳಗುತ್ತಿಲ್ಲ. ಬದಲು ಇಲ್ಲಿಂದ ಡೂಯಿಯ ದೇಶ ಅಮೇರಿಕಾದಲ್ಲಿಯೂ ಈ ಧ್ವನಿ ಮೊಳಗುತ್ತಿದೆ. ಅದಕ್ಕಿಂತ ಹೆಚ್ಚಾಗಿ ಈ ಧ್ವನಿ ಇಲ್ಲಿಂದ ಪ್ರಪಂಚದಾದ್ಯಂತ, ಇಡೀ ಲೋಕದಲ್ಲಿ ದೇಶ ದೇಶಗಳಲ್ಲಿ, ಗ್ರಾಮ ಗ್ರಾಮಗಳಲ್ಲಿ, ಮನೆ ಮನೆಗಳಲ್ಲಿ ಆಲಿಸಲಾಗುತ್ತಿದೆ.

ಹಾಗೆ ಇಂದು ಈ ನಗರದ ಎಲ್ಲ ಭಾಗಗಳಿಂದ ಮತ್ತು ಇಲ್ಲಿಯ ಹಗಲಿರುಳಿನ ಕ್ಷಣ ಕ್ಷಣವು ಸಹ ಹಝುರತ್ ಅಖ್‌ದಸ್ ಮಸೀಹ್ ಮೌಊದ್(ಅ) ರವರ ಸತ್ಯತೆಯ ಸಾಕ್ಷ್ಯವನ್ನು ಹೇಳುತ್ತಿದೆ. "ಸುಬ್ಹಾನಲ್ಲಾಹ ಏ ಬಿಹಮ್ದಿಹಿ ಏ ಸುಬ್ಹಿನಲ್ಲಾಹಿಲ್ ಅಝೀಮ್."

ಜುಮುಅ ನಮಾಝಿನಲ್ಲಿ Zion ಜಮಾಅತ್ ಅಲ್ಲದೇ ಅಮೇರಿಕಾದ ವಿವಿಧ ಇತರ ಜಮಾಅತುಗಳಿಂದ ಜಮಾಅತ್ ಬಾಂಧವರು ಬಹು ದೂರ ದೂರದ ಪ್ರಯಾಣಗಳನ್ನು ಮಾಡಿ ಇಲ್ಲಿ ಭಾಗವಹಿಸಲು ಬಂದಿರುತ್ತಾರೆ. ಇಲ್ಲಿ ಬಂದು ಸೇರಿರುವವರಲ್ಲಿ ಬಹುದೊಡ್ಡ ಸಂಖ್ಯೆ ಒಂದು ಸಾವಿರದಿಂದ ಎರಡು ಸಾವಿರದ ಮೈಲುಗಳ ದೂರದ ಪ್ರವಾಸಮಾಡಿ ಬಂದವರಾಗಿದ್ದರು. ಜಮಾಅತ್ ನಮಾಝಿನಲ್ಲಿ ಭಾಗವಹಿಸಿದವರ ಸಂಖ್ಯೆ ಎರಡು ಸಾವಿರಕ್ಕಿಂತಲೂ ಹೆಚ್ಚಾಗಿತ್ತು.

ಅಮೇರಿಕಾ ಅಲ್ಲದೆ, ಯು.ಕೆ. ಜರ್ಮನಿ, ಸ್ವೀಡನ್, ಬ್ರಾಝೀಲ್, ಗಿಯಾನ, ಸುರೇನಾಮ್, ಪಾಕಿಸ್ತಾನ, ಕಬಾಬೀರ, ಕೆನಾಡ ಜಮಾಅತಿನ ಪ್ರತಿನಿಧಿಗಳು ಮತ್ತು ಇತರ ಬಾಂಧವರು ಈ ಮಸೀದಿಯ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಲು ಬಂದಿದ್ದರು.

ಕಾರ್ಯಕ್ರಮದನ್ವಯ 1 ಗಂಟೆಗೆ ಹುಝೂರ್ ಅನ್ವರ್(ಅಬಿಅ) ಮಸ್ಜಿದ್ ಫತಹ ಅಝೀಮ್ ಆಗಮಿಸಿದ್ದರು ಮತ್ತು ಕುತುಬ ಜುಮುಅ ನೀಡಿದರು. (ಈ ಖುತುಬದ ಸಾರಾಂಶ, 6 ಅಕ್ಟೋಬರ್ 2022 ರ ಪ್ರಕಟಗೊಂಡಿದೆ ಅಖ್ಬಾರೆ ಬದರ್ ಸಂಚಿಕೆ ಸಂಖ್ಯೆ 40 ರಲ್ಲಿ ಅದರ ಸಂಪೂರ್ಣ ಭಾಗ ಅದೇ ಸಂಚಿಕೆಯಲ್ಲಿ ಪರಿಶೀಲಿಸಬಹುದು.)

ಹುಝೂರ್ ಅನ್ವರ್(ಅಬಿಅ) ಅವರು ಈ ಕುತುಬ ಜುಮುಅ 1:50 ಗಂಟೆಯವರೆಗೆ ಜಾರಿಯಲ್ಲಿತ್ತು. ನಂತರ ಹುಝೂರೆ ಅನ್ವರ್ ಜುಮುಅ ನಮಾಝ್‌ನೊಂದಿಗೆ ಅಸರ್ ನಮಾಝ್ ಒಟ್ಟುಗೂಡಿಸಿ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ಹುಝೂರೆ ಅನ್ವರ್ ತಮ್ಮ ವಸತಿಯತ್ತ ತೆರಳಿದರು.

**(ಮುಂದುವರಿಯುವುದು)**

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಒಳ್ಳೆಯವರಾಗಿರುತ್ತಾರೆ ಆದರೆ ಇತರರನ್ನು ಉಳಿಸುವ ಬಗ್ಗೆ ಕಾಳಜಿ ವಹಿಸುವುದಿಲ್ಲ ಮತ್ತು ಕೆಲವರು ಇತರರ ಬಗ್ಗೆ ಕಾಳಜಿ ವಹಿಸುತ್ತಾರೆ ಆದರೆ ತಮ್ಮ ವೈಯಕ್ತಿಕ ಸುಧಾರಣೆಗೆ ಗಮನ ಕೊಡುವುದಿಲ್ಲ. ಸರ್ವಶಕ್ತನಾದ ಅಲ್ಲಾಹನ ಪರಿಪೂರ್ಣ ಉಪಸ್ಥಿತಿಯನ್ನು ಪಡೆಯಲು, ಎರಡೂ ವಿಷಯಗಳು ಅವಶ್ಯಕ, ಅಂದರೆ ಭಯಭಕ್ತಿ ಮತ್ತು ಸತ್ಕರ್ಮಗಳು ಮಾಡುವವನು ಎಂದು ಅಲ್ಲಾಹನು ಹೇಳಿದನು.

ಈ ಸ್ಥಳದಲ್ಲಿ, ಭಯಭಕ್ತಿಯುಳ್ಳವರು ಪ್ರಪಂಚದ ಬಗ್ಗೆ ಪ್ರಜ್ಞೆ ಹೊಂದಿಲ್ಲ ಎಂದು ಅರ್ಥವಲ್ಲ ಎಂದು ನೆನಪಿನಲ್ಲಿಡಬೇಕು. ಪವಿತ್ರ ಖುರ್‌ಆನ್‌ನಲ್ಲಿ, ಅಂತಹ ವ್ಯಕ್ತಿಯು ಹೆಸರು ಜಾಹಿಲ್ ಎಂದು ಉಲ್ಲೇಖಿಸಲಾಗಿದೆ. ಒಬ್ಬ ಭಯಭಕ್ತಿಯುಳ್ಳವನು ತನ್ನ ಎಲ್ಲಾ ಕ್ರಿಯೆಗಳಲ್ಲಿ ಅಲ್ಲಾಹನ ಭಯವನ್ನು ಕಾಣುತ್ತಾನೆ. ಯಾರು ಏನನ್ನೂ ಮಾಡದವನಿಗೆ ಎಲ್ಲಿ ಭಯ ಹುಟ್ಟುತ್ತದೆ? ಮುತ್ತಖಿ (ಭಯಭಕ್ತಿಯುಳ್ಳವನು) ಎಂಬ ಪದವೇ ತಿಳಿಸುವುದೇನೆಂದರೆ ಅವನು ಅಪಾಯದಲ್ಲಿ ಬೀಳುತ್ತಾನೆ ಆದರೆ ಅಲ್ಲಾಹನು ಅವನನ್ನು ರಕ್ಷಿಸುತ್ತಾನೆ. ಆದ್ದರಿಂದ ಲೌಕಿಕ ವ್ಯವಹಾರಗಳಲ್ಲಿ ತೊಡಗಿಸಿಕೊಂಡರೂ ಅದರ ದುಷ್ಟ ಪ್ರಭಾವದಿಂದ ಸುರಕ್ಷಿತವಾಗಿ ಉಳಿಯುವವನೇ ಮುತ್ತಖಿ (ಭಯಭಕ್ತಿಯುಳ್ಳವ).

ಮುಹ್ಸಿನ್‌ಗೆ ಸಂಬಂಧಿಸಿದಂತೆ, ಇದು ಮುಸ್ರಫ್‌ನ ಅರ್ಥವನ್ನು ಹೊಂದಿಲ್ಲ ಎಂಬುದನ್ನು ಸಹ ನೆನಪಿನಲ್ಲಿಡಬೇಕು. ರಸೂಲುಲ್ಲಾಹ್(ಸ) ನುಡಿಯುತ್ತಾರೆ ನೀವು ನಿಮ್ಮ ವಾರಿಸುದಾರರಿಗಾಗಿ ಸಂಪತ್ತನ್ನು ಬಿಟ್ಟರೆ, ಅವರು ಜನರ ಮುಂದೆ ತಮ್ಮ ಕೈಗಳನ್ನು ಚಾಚುವ ಸ್ಥಿತಿಯಲ್ಲಿ ಅವರನ್ನು ಬಿಡುವುದಕ್ಕಿಂತ ಉತ್ತಮವಾಗಿದೆ.

ಮುಹ್ಸಿನ್ ಎಂದರೆ ಜಗತ್ತಿಗೆ ಸೌಂದರ್ಯವನ್ನು ತರುವ ಇಂತಹ ಕೆಲಸಗಳನ್ನು ಮಾಡುವವನು. ಸ್ವಂತ ಮನೆಯನ್ನು ಹಾಳು ಮಾಡಿದವನು ಸೌಂದರ್ಯವನ್ನು ಹೇಗೆ ಸೃಷ್ಟಿಸಬಲ್ಲನು? ಹಾಗಾಗಿ ಮುಹ್ಸಿನ್ ತನ್ನ ಮನೆಯನ್ನು ಸುರಕ್ಷಿತವಾಗಿರಿಸುವ ಮತ್ತು ಪ್ರಪಂಚದ ಬಗ್ಗೆಯು ಸಹ ಕಾಳಜಿವಹಿಸುವವನಾಗಿರುತ್ತಾನೆ. ಆದರೆ ಇದರ ಅರ್ಥವು ಅವನು ಸ್ವತಃ ಐಷಾರಾಮದಲ್ಲಿದ್ದು ಖರ್ಚು ಮಾಡುವ ಸಂದರ್ಭ ಬಂದಾಗ ನನ್ನ ಬಳಿ ಏನೂ ಇಲ್ಲ ಎಂದು ಹೇಳುವುದಿಲ್ಲ.

ಅಂತೆಯೇ, ಮುಹ್ಸಿನ್‌ನ ಕ್ರಿಯೆಯು ಒಳ್ಳೆಯ ಫಲಿತಾಂಶವನ್ನು ನೀಡುತ್ತದೆ. ಆದುದರಿಂದ ನೈತಿಕವಾಗಿರಲಿ ನಾಗರಿಕವಾಗಿರಲಿ ಯಾರಿಗೆ ಕೆಟ್ಟ ಫಲಿತಾಂಶವಿದೆಯೋ ಅವರು ಮುಹ್ಸಿನ್ ಅಲ್ಲ.

ಈ ಆಯತ್‌ನಲ್ಲಿ ಯಹೂದಿಗಳು ಮತ್ತು ಕ್ರಿಶ್ಚಿಯನ್ನರೊಂದಿಗಿನ ಯುದ್ಧದ ಫಲಿತಾಂಶವನ್ನು ಸಹ ಹೇಳಲಾಗಿದೆ. ಅದೇನೆಂದರೆ ಸರ್ವಶಕ್ತನಾದ ಅಲ್ಲಾಹನು ಮುಸ್ಲಿಮರನ್ನು ಬೆಂಬಲಿಸುತ್ತಾನೆ ಮತ್ತು ಯಾರೊಂದಿಗೆ ಅಲ್ಲಾಹನಿದ್ದಾನೊ, ಯಾರು ಅವನ ಮೇಲೆ ವಿಜಯ ಸಾಧಿಸಲು ಸಾಧ್ಯ ಎಂಬುದು ಸ್ಪಷ್ಟವಾಗಿದೆ. **(ತಫ್ಸೀರ್ ಕಬೀರ್, ಸಂಪುಟ-4, ಪುಟ-276, ಪ್ರಕಟಿತ ಖಾದಿಯಾನ್ 2010)**

**ಸದರ್ ಅಂಜುಮನ್ ಅಹ್ಮದಿಯಾ, ಅಂಜುಮನ್ ತೆಹ್ರೀಕೆ ಜದೀದ್, ಅಂಜುಮನ್ ವಖ್‌ಫೆ ಜದೀದ್ ಖಾದಿಯಾನ್‌ನಲ್ಲಿ ಸೇವೆಸಲ್ಲಿಸಲು ಆಸಕ್ತಿ ಹೊಂದಿದವರು ಗಮನಿಸಬೇಕು**

**ಮಾಲಿ (ತೋಟಗಾರ) / ಕೇರ್‌ಟೇಕರ್ / ಕಾವಲುಗಾರ / ಅಡುಗೆಗಾರ / ರೊಟ್ಟಿ ಮಾಡುವವ /ಮಸ್ಜಿದ್ ಸೇವಕಗೆ ನಾಲ್ಕನೇ ಗ್ರೇಡ್‌ಗೆ (ಶರತ್ತುಗಳು) ಅವಶ್ಯಕತೆಗಳು**

(1) ಅಭ್ಯರ್ಥಿಯ ವಯಸ್ಸು 40 ವರ್ಷಗಳಿಗಿಂತ ಹೆಚ್ಚಿರಬೇಕು ಮತ್ತು 18 ವರ್ಷಗಳಿಗಿಂತ ಕಡಿಮೆಯಿರಬಾರದು (2) ಅಭ್ಯರ್ಥಿಯ ಯಾವುದೇ ಶೈಕ್ಷಣಿಕ ಅವಶ್ಯಕತೆಗಳಿಲ್ಲ (3) ಜನನ ಪ್ರಮಾಣಪತ್ರವನ್ನು ಹಾಜರುಪಡಿಸಬೇಕು (4) ಈ ಪ್ರಕಟಣೆಯ ನಂತರ 2 ತಿಂಗಳೊಳಗೆ ಸ್ವೀಕರಿಸಿದ ಅರ್ಜಿಗಳನ್ನು ಪರಿಗಣಿಸಲಾಗುವುದು (5) ಕಾರ್ಮಿಕರ ನೇಮಕಾತಿಗಾಗಿ ಕೇಂದ್ರ ಸಮಿತಿಯ ಸಂದರ್ಶನದಲ್ಲಿ ಯಶಸ್ವಿಯಾಗುವ ಅಭ್ಯರ್ಥಿಗಳನ್ನು ಮಾತ್ರ ಸೇವೆಗೆ ತೆಗೆದುಕೊಳ್ಳಲಾಗುತ್ತದೆ (6) ಸಂದರ್ಶನದಲ್ಲಿ ಯಶಸ್ವಿಯಾದರೆ, ಅಭ್ಯರ್ಥಿಯು ನೂರ್ ಆಸ್ಪತ್ರೆ ಖಾದಿಯಾನ್‌ನಲ್ಲಿ ವೈದ್ಯಕೀಯ ಪರೀಕ್ಷೆಗೆ ಒಳಗಾಗಬೇಕಾಗುತ್ತದೆ ಮತ್ತು ಯಾವ ಅಭ್ಯರ್ಥಿಗಳನ್ನು ನೂರ್ ಆಸ್ಪತ್ರೆಯ ವೈದ್ಯಕೀಯ ಮಂಡಳಿಯ ವರದಿಯ ಪ್ರಕಾರ ಆರೋಗ್ಯಕರ ಮತ್ತು ಸದೃಢರಾಗಿರುವವರು ಅರ್ಹರಾಗಿರುತ್ತಾರೆ ಅಂತಹ ಅಭ್ಯರ್ಥಿಗೆ ಮಾತ್ರ ಸೇವೆಗೆ ಪರಿಗಣಿಸಲಾಗುತ್ತದೆ (7) ಆಯ್ಕೆಯ ಸಂದರ್ಭದಲ್ಲಿ, ಅಭ್ಯರ್ಥಿಯು ಅವನ/ಅವಳ ಸ್ವಂತ ವಸತಿಯ ವ್ಯವಸ್ಥೆ ಮಾಡಬೇಕಾಗುತ್ತದೆ (8) ಖಾದಿಯಾನ್‌ಗೆ ಪ್ರಯಾಣದ ವೆಚ್ಚಗಳು ಅಭ್ಯರ್ಥಿಯು ಜವಾಬ್ದಾರಿಯಾಗಿರುತ್ತದೆ. (**ಗಮನಿಸಿ:** ಸಂದರ್ಶನದ ದಿನಾಂಕದ ಬಗ್ಗೆ ಅಭ್ಯರ್ಥಿಗಳಿಗೆ ನಂತರ ತಿಳಿಸಲಾಗುವುದು)

***ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:***

ನಝಾರತ್ ದೀವಾನ್ ಸ್ರ ಅಂಜುಮನ್ ಅಹ್ಮದಿಯಾ
ಖಾದಿಯಾನ್-143516
ಮೊಬೈಲ್: 09682627592, 09682587713,
ಕಛೇರಿ: 01872-501130
ಇ-ಮೇಲ್: diwan@qadian.in

## ದಿವ್ಯದೂತರು (ಮಲಾಯಿಕ)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: "ಒಬ್ಬ ಮಹತ್ವಶಾಲಿ ವ್ಯಕ್ತಿ ದೇವನ ಪ್ರಾತಿನಿಧ್ಯದ ಉಡುಗೆಯಿಂದ ಭೂಷಿತರಾಗಿ (ದೇವನ ಖಲೀಫರಾಗಿ) ಮತ್ತು ದೇವವಾಣಿಯಿಂದ ಅನುಗ್ರಹೀತರಾಗಿ ಭೂಮಿಗೆ ಇಳಿಯುವಾಗ ದಿವ್ಯದೂತರ ಮತ್ತು ಪವಿತ್ರಾತ್ಮದ ಅವತರಣ ಅಥವಾ ಭೂಮಿಗೆ ಇಳಿಯುವಿಕೆ ಉಂಟಾಗುತ್ತದೆ.ಪವಿತ್ರಾತ್ಮ ವಿಶಿಷ್ಟವಾಗಿ ದೇವನ ಪ್ರತಿನಿಧಿಗೆ ಲಭಿಸುತ್ತದೆ."

***(ಫತ್‌ಹೆ ಇಸ್ಲಾಮ್; ರೂಹಾನೀ ಖಝಾಇನ್ ಸಂಪುಟ 3, ಪುಟ 12)***

**ಆಡಂಬರ ಮತ್ತು ತೋರ್ಪಡಿಕೆಗೊಸ್ಕರ ಹಕ್ಕ್ ಮಹರನ್ನು ನಿಶ್ಚಯಿಸುವುದು ತಪ್ಪು ಸಂಪ್ರದಾಯವಾಗಿರುತ್ತದೆ.**

ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ:

ವಧು ಹಾಗೂ ವರನ ಕಡೆಯವರು ಇಬ್ಬರು ಸೇರಿ ರಾಜಿಯಾಗಿ ಹಕ್ಕ್ ಮಹರ್ ನಿಶ್ಚಯಿಸಿ ಕೊಳ್ಳುತ್ತಾರೆ ಇದಕ್ಕೆ ಯಾವುದೇ ಆಕ್ಷೇಪವಿಲ್ಲ. ಆದರೆ ಶರೀಅತ್ತಿನಲ್ಲಿ ಹಕ್ಕ್ ಮಹರ್ ಇಷ್ಟೇ ನೀಡಬೇಕೆಂಬ ನಿಯಮ ಅಧಿಕೃತವಾಗಿ ಹದೀಸುಗಳಲ್ಲಿ ಯಾವುದೇ ಉಲ್ಲೇಖವಿಲ್ಲ. ಆದರೆ ಆ ಸಂಧರ್ಭಕನ್ನುಸಾರ ಹಕ್ಕ್ ಮಹರ್ ನಿಶ್ಚಯಿಸಿಕೊಳ್ಳಬಹುದು. ಅಂದರೆ ಪ್ರಸಕ್ತ ಸಮಯದಲ್ಲಿನ ಜನರ ಜೀವನ ಮಟ್ಟವೇ ಆಧಾರವಾಗಿರುತ್ತದೆ.

ನಮ್ಮ ಪ್ರಾಂತ್ಯದಲ್ಲಿರುವ ಒಂದು ಕೆಟ್ಟ ಸಂಪ್ರದಾಯವೆಂದರೆ ಕೇವಲ ಹೊರ ಜಗತ್ತಿನ ತೋರಿಕೆಗಾಗಿ ಹಾಗೂ ಆಡಂಬರಕ್ಕಾಗಿ ಲಕ್ಷಾಂತರ ಹಕ್ಕ್ ಮಹರ್ ಅನ್ನು ನಿಶ್ಚಿಸಿಕೊಳ್ಳುತ್ತಾರೆ. ಆದರೆ ಅವರ ಉದ್ದೇಶ ಬೇರೆಯೇ ಆಗಿರುತ್ತದೆ. ಅದೇ ರೀತಿ ವಧುವಿನ ಕಡೆಯವರು ವರನನ್ನು ತನ್ನ ಹಿಡಿತದಲ್ಲಿ ಇರಿಸಿಕೊಳ್ಳಲು ಈ ರೀತಿಯ ಹಕ್ಕ್ ಮಹರ್‌ಅನ್ನು ನಿಶ್ಚಯಿಸಿಕೊಳ್ಳುತ್ತಾರೆ. ಆದರೆ ಇದರಿಂದ ಬೇರೆ ಅನೇಕ ಸಮಸ್ಯೆಗಳು ಉದ್ಭವವಾಗುತ್ತದೆ. **(ಮಲ್‌ಫೂಝಾತ್, ಸಂಪುಟ-3, ಪುಟ-284) (ರಿಶ್ತನಾತ ವಿಭಾಗ, ನಝಾರತ್ ಇಸ್ಲಾಹ್ ವ ಇರ್ಷಾದ್, ಖಾದಿಯಾನ್)**

**ವಾಖಿಫೀನೆ ಝಿಂದಗಿ ಹಾಗೂ ಧರ್ಮೋಪದೇಶ ಮತ್ತು ತರಬೇತಿಯ ಕರ್ತವ್ಯವನ್ನು ನಿರ್ವಹಿಸಬಲ್ಲ ಧಾರ್ಮಿಕ ಜ್ಞಾನವನ್ನು ಹೊಂದಿರುವವರ ಅಗತ್ಯವು ಹೆಚ್ಚುತ್ತಿದೆ. ಆದ್ದರಿಂದ, ಈ ಕೆಲಸವನ್ನು ವಿಶೇಷವಾಗಿ ಮಾಡುವ ಒಂದು ಗುಂಪು ಇರಬೇಕು. ನಿಮ್ಮ ಮಕ್ಕಳನ್ನು ಜಾಮಿಯ ಅಹ್ಮದೀಯಾದಲ್ಲಿ ಶಿಕ್ಷಣವನ್ನು ಪಡೆಯಲು ಅರ್ಪಿಸಿ**

ಹಝ್ರತ್ ಅಮೀರ್-ಉಲ್-ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರು ನುಡಿಯುತ್ತಾರೆ:

ಜಮಾಅತ್ತಿನ ಅಗತ್ಯಗಳು ಹೆಚ್ಚಾದಂತೆ ತಬ್ಲೀಗಿನ ಕ್ಷೇತ್ರ ಮತ್ತು ಇತರ ಸೇವಾ ಕ್ಷೇತ್ರಗಳಲ್ಲಿ ವಾಖಿಫೀನೆ ಝಿಂದಗಿಯರ ಮತ್ತು ಮುಬಲ್ಲಿಗೀನರ (ಪ್ರಚಾರಕರು) ಅಗತ್ಯವಿದೆ. ಈ ವಿಸ್ತರಣೆಯಾಗುತ್ತಿದ್ದಂತೆ ಕೆಲಸವು ಸಹ ಹೆಚ್ಚುತ್ತಿದೆ, ಅಹ್ಮದಿಯತ್‌ನ ಸಂದೇಶ ಹರಡುತ್ತಿದೆ. ಜಗತ್ತು ಕೂಡ ಅಹ್ಮದಿಯತ್ ಅನ್ನು ಸ್ವೀಕರಿಸುತ್ತಾ ಇದೆ. ಇದರೊಂದಿಗೆ, ವಾಖಿಫೀನೆ ಝಿಂದಗಿ ಹಾಗೂ ಧರ್ಮೋಪದೇಶ ಮತ್ತು ತರಬೇತಿಯ ಕರ್ತವ್ಯವನ್ನು ನಿರ್ವಹಿಸಬಲ್ಲ ಧಾರ್ಮಿಕ ಜ್ಞಾನವನ್ನು ಹೊಂದಿರುವವರ ಅಗತ್ಯವು ಹೆಚ್ಚುತ್ತಿದೆ......... ಜಮಾಅತ್ತಿನ ಪ್ರತಿಯೊಬ್ಬ ವ್ಯಕ್ತಿಯು ಯಾವಾಗಲೂ ತಬ್ಲೀಗ್‌ನಲ್ಲಿ ಅಥವಾ ತರಬೇತಿ ನೀಡುವುದರಲ್ಲಿ ನಿರತರಾಗಿರುಲು ಸಾಧ್ಯವಿಲ್ಲ ಆದ್ದರಿಂದ, ಈ ಕೆಲಸವನ್ನು ವಿಶೇಷವಾಗಿ ಮಾಡುವ ಒಂದು ಗುಂಪು ಇರಬೇಕು ಎಂದು ಅಲ್ಲಾಹನು ಹೇಳಿರುವನು. ಇನ್ನೊಂದು ಸ್ಥಳದಲ್ಲಿ, ಉಮ್ಮತ್ತಿನ ಪ್ರತಿಯೊಬ್ಬ ವ್ಯಕ್ತಿಗೂ ಒಳ್ಳೆಯ ಕಾರ್ಯಗಳನ್ನು ಹರಡುವ, ಕೆಟ್ಟದ್ದನ್ನು ತಡೆಯುವ ಮತ್ತು ಅಲ್ಲಾಹನ ಕಡೆಗೆ ಅಹ್ವಾನಿಸುವ ಕರ್ತವ್ಯವನ್ನು ಪೂರೈಸುವ ಜವಾಬ್ದಾರಿಯನ್ನು ವಹಿಸಲಾಗಿದೆ. ಆದರೆ ಮತ್ತೆ ಹೇಳಿರುವುದು ಏಕೆಂದರೆ ಪ್ರಪಂಚದ ವ್ಯವಸ್ಥೆಯನ್ನು ಸಹ ನಡೆಸಬೇಕಾಗಿದೆ, ಆದ್ದರಿಂದ ಅದರಲ್ಲಿ ತೊಡಗಿರುವವರು ಯಾವಾಗಲೂ ಸಮಯವನ್ನು ನೀಡಲು ಸಾಧ್ಯವಿಲ್ಲ. ಧರ್ಮೋಪದೇಶ ಮತ್ತು ತರಬೇತಿಯ ಕೆಲಸವನ್ನು ಅತ್ಯುತ್ತಮ ರೀತಿಯಲ್ಲಿ ಮಾಡುವ ಮನೋಧರ್ಮ ಎಲ್ಲರಿಗೂ ಇರುವುದಿಲ್ಲ. ಮತ್ತು ಉಮ್ಮತ್ತಿನ ಎಲ್ಲಾ ಸದಸ್ಯರು ಧರ್ಮ ಮುಬಲ್ಲಿಗ್ ಮತ್ತು ಮುರಬ್ಬಿಯವರಿಗೆ ಅಗತ್ಯವಾದ ಧರ್ಮದ ತಿಳುವಳಿಕೆಯನ್ನು ಪಡೆಯಲು ಸಾಧ್ಯವಿಲ್ಲ. ಮತ್ತು ಎಲ್ಲಾ ಜನರಿಗೆ ವಿಶೇಷ ಗಮನದಿಂದ ತರಬೇತಿಯ ಸಹ ನೀಡಲು ಸಾಧ್ಯವಾಗುವುದಿಲ್ಲ. ಆದ್ದರಿಂದ, ಸರ್ವಶಕ್ತನಾದ ಅಲ್ಲಾಹನ ಆದೇಶಗಳನ್ನು, ಅನುಸರಿಸಬೇಕಾದ ಆಜ್ಞೆಗಳನ್ನು ಮತ್ತು ತಡೆಯಬೇಕಾದ ನಿಷೇಧಗಳನ್ನು ಪರಿಚಯ ಮಾಡಿಕೊಳ್ಳಲು, ಮತ್ತು ಅದರ ಆಳವಾದ ಬುದ್ಧಿವಂತಿಕೆಯನ್ನು ಕಲಿಯಲು ಮತ್ತು ನಂತರ ಅದನ್ನು ಹರಡಲು. ಧರ್ಮವನ್ನು ಪೂರ್ಣ ಗಮನದಿಂದ ಕಲಿಯುವ ಒಂದು ವಿಶೇಶ ಗುಂಪು ಇರಬೇಕು. ಮಾಶಾಅಲ್ಲಾಹ್, ತಮ್ಮ ಅಭಿರುಚಿ ಮತ್ತು ಹವ್ಯಾಸಗಳಿಂದ ಲೌಕಿಕ ಶಿಕ್ಷಣದ ಜೊತೆಗೆ ಧಾರ್ಮಿಕ ಜ್ಞಾನದ ಬಗ್ಗೆ ಉತ್ತಮ ತಿಳುವಳಿಕೆಯನ್ನು ಹೊಂದಿರುವ ಅನೇಕ ಜನರು ಜಮಾತ್‌ನಲ್ಲಿದ್ದಾರೆ. ಆದರೆ ಕೆಲವೊಮ್ಮೆ ಅಥವ ಸಾಮಾನ್ಯವಾಗಿಯೇ ಅವರ ಇತರ ಕಾರ್ಯಗಳ ಕಾರಣದಿಂದಾಗಿ ಸಮಯವನ್ನು ನೀಡುಲು ನಿರಂತರವಾಗಿ ಸಾಧ್ಯವಾಗುವುದಿಲ್ಲ. ಅದಾಗ್ಯೂ, ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ, ಧರ್ಮದ ಕೆಲಸಕ್ಕಾಗಿ ವಾಖಿಫೀನೆ ಝಿಂದಗಿಯರ ಗುಂಪು ಇರಬೇಕು ಮತ್ತು ಇಸ್ಲಾಂ ಸಾರ್ವತ್ರಿಕ ಧರ್ಮವಾಗಿರುವುದರಿಂದ ಅದು ಪ್ರತಿಯೊಂದು ಪಂಗಡದಿಂದ, ಅಂದರೆ ಪ್ರತಿಯೊಂದು ಗುಂಪಿನಿಂದ, ಪ್ರತಿ ವರ್ಗದಿಂದ, ಪ್ರತಿಯೊಂದು ವಿಭಾಗದಿಂದ ಜನರ ಜನರ ಗುಂಪು ಇರಬೇಕು. ತದನಂತರ ಮತ್ತಷ್ಟು ವಿಸ್ತರಿಸಿದರೆ, ಪ್ರತಿಯೊಂದು ಖೌಮಿನ(ಗೋತ್ರದಿಂದ) ಜನರು ಧರ್ಮವನ್ನು ಕಲಿಯಬೇಕು ಮತ್ತು ಮುಂದೆ ಕಲಿಸಬೇಕು ಎಂದು ಹೇಳಿರುವನು. ಪ್ರತಿಯೊಂದು ಖೌಮಿನವರು ಮತ್ತು ಪ್ರತಿಯೊಂದು ವರ್ಗವು ವಿಭಿನ್ನ ಮನೋಧರ್ಮ, ಮನೋವಿಜ್ಞಾನ ಮತ್ತು ವಿಧಾನವನ್ನು ಹೊಂದಿದೆ. ಅದಕ್ಕೆ ತಕ್ಕಂತೆ ಉಪದೇಶ ಮಾಡುವ ವಿಧಾನವನ್ನು ಕೈಗೊಳ್ಳಬೇಕು. ಈ ರೀತಿಯಲ್ಲಿ, ತಬ್ಲೀಗ್ ಮತ್ತು ತರಬೇತಿಯು ಸುಲಭವಾಗುತ್ತದೆ. ಏನೇ ಇರಲಿ, ಸರ್ವಶಕ್ತನಾದ ಅಲ್ಲಾಹನು ತಬ್ಲೀಗಿಗಾಗಿ ಮತ್ತು ತರಬೇತಿಗಾಗಿ ಕಾರ್ಯವನ್ನು ನಿರ್ವಹಿಸುವ ವಿಶ್ವಾಸಿಗಳ ಗುಂಪು ಇರಬೇಕು ಮತ್ತು ನಂತರ ಪ್ರತಿಯೊಂದು ಖೌಮು ಮತ್ತು ಪ್ರತಿಯೊಂದು ವರ್ಗದ ಜನರು ಇರಬೇಕು ಇದರಿಂದ ಈ ಕಾರ್ಯವನ್ನು ಸುಗಮಗೊಳಿಸಬಹುದು ಎಂದು ನಮಗೆ ಮಾರ್ಗದರ್ಶನ ನೀಡಿರುವನು.

ಆದುದರಿಂದ ಅಹ್ಮದಿಯಾ ಜಮಾಅತ್ ಈ ತತ್ವದಡಿಯಲ್ಲಿ ಧರ್ಮಕ್ಕಾಗಿ ತನ್ನ ಜೀವನವನ್ನು ಮುಡಿಪಾಗಿಡುವ ವ್ಯವಸ್ಥೆಯನ್ನು ಹೊಂದಿದೆ. ಮತ್ತು ನಾನು ಹೇಳಿದಂತೆ, ಅಲ್ಲಾಹನ ಅನುಗ್ರಹದಿಂದ ವಿವಿಧ ಖೌಮುಗಳು ಮತ್ತು ವರ್ಗಗಳ ಜನರು ಈಗ ಈ ವ್ಯವಸ್ಥೆಯ ಭಾಗವಾಗಿದ್ದಾರೆ ಮತ್ತು ಆಗುತ್ತಿದ್ದಾರೆ. ಮತ್ತು ನಾನು ಹೇಳಿದಂತೆ, ಜಮಾಅತ್ತಿನ ಅಗತ್ಯತೆಗಳು ಹೆಚ್ಚಾದಂತೆ, ಈ ಸಂಖ್ಯೆಯ ಅಗತ್ಯವು ಹೆಚ್ಚಾಗುತ್ತದೆ ಮತ್ತು ಈ ಅಗತ್ಯವು ಬೆಳೆಯುತ್ತಲೇ ಇರುತ್ತದೆ. ಇದೀಗ ಪ್ರಸ್ತುತ ಕಾಲದಲ್ಲಿ ಅಗತ್ಯವಿರುವುದು ಮಾತ್ರವಲ್ಲದೆ ಭವಿಷ್ಯದಲ್ಲಿಯು ಇದರ ಅಗತ್ಯವು ಹೆಚ್ಚಾಗಲಿದೆ.

**(ಖುತ್‌ಬ ಜುಮುಅ, ಅಕ್ಟೋಬರ್ 22, 2010)**

**(ಇಂಚಾರ್ಜ್ ನಖ್ಫೆ ನೌ ವಿಭಾಗ ಭಾರತ)**

***128 ನೇ ಜಲ್ಸಾ ಸಾಲಾನ ಖಾದಿಯಾನ್ 29, 30, 31 ಡಿಸೆಂಬರ್ 2023ರಂದು ಆಯೋಜಿಸಲಾಗುವುದು***

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 128ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 29, 30 ಮತ್ತು 31ನೇ ಡಿಸೆಂಬರ್ 2023 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್-ವ-ಇರ್‌ಶಾದ್ ಖಾದಿಯಾನ್)**

**ಖಾದಿಯಾನ್ ದಾರುಲ್ ಅಮಾನ್‌ನಲ್ಲಿ ವಾರ್ಷಿಕ ಇಜ್ತೆಮಾ ನಡೆಯುವ ದಿನಾಂಕಗಳು**

ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು ಭಾರತದಲ್ಲಿ ಅಂಗ ಸಂಸ್ಥೆಗಳ (ಮಜ್ಲಿಸ್ ಅನ್ಸರುಲ್ಲಾ, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಲಜ್ನಾ ಇಮಾಇಲ್ಲಾ) ರಾಷ್ಟ್ರೀಯ ವಾರ್ಷಿಕ ಕೂಟಗಳನ್ನು (ಇಜ್ತೆಮಾ) 27, 28 ಮತ್ತು 29ನೇ ಅಕ್ಟೋಬರ್ 2023 ರಂದು (ಶುಕ್ರವಾರ, ಶನಿವಾರ, ಭಾನುವಾರ) ಆಯೋಜಿಸಲು ಅನುಮತಿ ನೀಡಿದ್ದಾರೆ.

ಎಲ್ಲಾ ಉಪ ಸಂಸ್ಥೆಗಳ ಸದಸ್ಯರು ಖಾದಿಯಾನಿನಲ್ಲಿ ಈ ಆಧ್ಯಾತ್ಮಿಕ ಪರಿಸರದಲ್ಲಿ ಆಯೋಜಿಸಲಾಗುವಂತಹ ಇಜ್ತೆಮಾಗಳಲ್ಲಿ ಪಾಲ್ಗೊಳ್ಳಲು ಇಂದಿನಿಂದಲೆ ತಯಾರಿ ಪ್ರಾರಂಭಿಸಿರಿ. ಈ ಇಜ್ತೆಮಾಗಳು ತರಬೇತಿಯ ಮುಖ್ಯ ಮೂಲವಾಗಿದೆ.

**(ಸದರ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಭಾರತ)**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2023-25 Vol No.04, Thursday, 01 June 2023, Issue No. 22

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

## ಇಸ್ಲಾಂ ಮತ್ತು ಸೈಯ್ಯದ್‌ನಾ ಹಝ್ರತ್ ಮಸಿಹ್ ಮೌಊದ್ ಅಲೈಹಿಸ್ಸಲಾಮ್‌ರವರ ಕಟು ವಿರೋಧಿಯಾದ ಅಲೆಕ್ಸಾಂಡರ್ ಡೂಯಿಯ ಝಿಯಾನ್ ನಗರದಿಂದ ಪ್ರಾರಂಭವಾದ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಅಸಾಧಾರಣ ಅನುಗ್ರಹದಾಯಕ ಅಮೇರಿಕದ ಐತಿಹಾಸಿಕ ಪ್ರವಾಸ ಸೆಪ್ಟೆಂಬರ್, ಅಕ್ಟೋಬರ್ 2022

*(ಬದರ್ ಸಂಚಿಕೆ-21ರ ಉಳಿದ ಭಾಗ ಮುಂದುವರಿಸಲಾಗಿದೆ)*

### 29 ಸೆಪ್ಟೆಂಬರ್ ಗುರುವಾರ
### ಭೇಟಿ ಮಾಡಿದವರ ಅನಿಸಿಕೆಗಳು

zion ಜಮಾಅತಿನ ಉಸ್ಮಾನ್ M Bowe ಸಾಹಿಬ್ ಹೇಳುತ್ತಾರೆ. ಎರಡು ದಿನ ಮೊದಲು ನಾವು ಮಸೀದಿಯ ಹೊರಗೆ ನಿಂತುಕೊಂಡಿದ್ದೆವು. ಹುಝೂರ್ ಅನ್ವರ್ ಹೋಗುವಾಗ ನನ್ನತ್ತ ಮತ್ತು ನನ್ನ ಪುತ್ರನತ್ತ ಕೇವಲ ಒಂದು ಕ್ಷಣ ಮಾತ್ರಕ್ಕೆ ದೃಷ್ಟಿಹಾಯಿಸಿದ್ದರು. ಇಂದು ನಾವು ಕುಟುಂಬ ಸಮೇತ ಭೇಟಿ ಮಾಡಿದೆವು. ಹುಝೂರ್ ಅನ್ವರ್ ಹೇಳಿದರು. ನಾನು ನಿಮಗೆ ಎರಡು ದಿನಗಳ ಹಿಂದೆ ಮಸೀದಿಯ ಹೊರಗೆ ನೋಡಿದ್ದೆ. ನಾನು ಅಚ್ಚರಿಯೊಂದಿಗೆ ಈ ಸಣ್ಣದಾದ ವಿಷಯ ಹೇಗೆ ಹುಝೂರ್ ಅನ್ವರ್(ಅಬಿಅ)ರ ನೆನಪಿನಲ್ಲಿ ಉಳಿದುಬಿಟ್ಟಿದೆ. ಮಹಿಳೆಯೊಬ್ಬಳು ಖಾಲಿದ್ ಬದರ್ ಸಾಹಿಬ್ ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತಾ ಹೇಳಿದರು. ಹುಝೂರ್!! ನಾನು ನಿಮ್ಮನ್ನು ಭೇಟಿ ಮಾಡಲು ಇಚ್ಛಿಸುತ್ತೇನೆ. ನನಗೆ ಇಲ್ಲಿಯವರೆಗೆ ತಮ್ಮನ್ನು ಭೇಟಿ ಮಾಡಲಾಗಲಿಲ್ಲ. ತಾವು ಇಲ್ಲಿ Zionಗೆ ಬರಬೇಕೆಂದು ನಾನು ಬಯಸುತ್ತೇನೆ. ಎಂದು ತುಂಬಾ ಸಮಯಗಳ ಹಿಂದೆ ನಾನು ಹುಝೂರರಿಗೆ ಪತ್ರ ಬರೆದಿದ್ದೆ. ಇಂದು ನನಗೆ ನಂಬಲೇ ಆಗುತ್ತಿಲ್ಲ. ಹುಝೂರ್ Zionಗೆ ಬಂದಿದ್ದಾರೆ, ನಾನು ಎಷ್ಟು ಭಾಗ್ಯಶಾಲಿಯಾಗಿದ್ದೇನೆ. ಹುಝೂರ್ ಅನ್ವರ್(ಅಬಿಅ)ಅವರೊಂದಿಗೆ ಭೇಟಿಯಾಯಿತು.

ಕೊಲಂಬಸ್‌ನಿಂದ ಬಂದಿದ್ದ ಮಹಿಳೆಯೊಬ್ಬಳು ಹೇಳಿದರು. ಇಂದಿನ ಭೇಟಿಯ ಕ್ಷಣವು ನನಗೆ ಒಂದು ವಿಶೇಷ ರೀತಿಯ ದೈವಿಕ ಕ್ಷಣವಾಗಿತ್ತು. ನಮಗೆ ನಿನ್ನೆಯವರೆಗೆ ತಿಳಿದಿರಲಿಲ್ಲ ಭೇಟಿಯಾಗಬಹುದೆಂದು. ನಮ್ಮ ಈ ಭೇಟಿ ಅಂತೂ ಒಂದು ಪವಾಡ ಸದೃಶ್ಯ ಭೇಟಿಯಾಗಿದೆ ಎಂದು ಹೇಳಿ ಅವರು ಅಳತೊಡಗಿದರು.

ಪಾಕಿಸ್ತಾನದಿಂದ ಬಂದಿದ್ದ ರಯ್ಯಾನ್ ಸಾಹಿಬ್ ಅವರು ಹೇಳಿದರು. ನಾನು ಈ ಅನುಭವವನ್ನು ಶಬ್ದಗಳಲ್ಲಿ ವಿವರಿಸಲು ಸಾಧ್ಯವಿಲ್ಲ. ನಾನು ಹುಝೂರ್ ಅನ್ವರ್(ಅಬಿಅ) ರವರನ್ನು ನೋಡುತ್ತಲೇ ಈ ಲೋಕದಲ್ಲಿರಲಿಲ್ಲ. ನಾನೇನು ಮಾತನಾಡಲು ಯೋಚಿಸದ್ದೆ ಅದೆಲ್ಲ ಮರೆತು ಹೋಗಿತ್ತು.

ಶಿಕಾಗೋವಿನ ನೂಮಾನ್ ಅಹ್ಮದ್ ಸಾಹಿಬ್ ಹೇಳಿದರು. ಭೇಟಿಯ ಮೊದಲು ತನ್ನ ಸ್ಥಿತಿ ಹೇಗಿತ್ತೆಂದರೆ ಶ್ವಾಸ ತೆಗೆಯಲು ಆಗುತ್ತಿರಲಿಲ್ಲ. ತುಂಬಾ ಗಾಬರಿ ಹಾಗೂ ಹೆದರಿಕೆ ಆವರಿಸಿತ್ತು. ಹುಝೂರರ ಕೋಣೆಗೆ ಪ್ರವೇಶ ಮಾಡಿ ಅವರ ಮುಖ ನೋಡುತ್ತಲೇ ಶ್ವಾಸ ತೆರೆಯುವಂತಾಯಿತು.

ಮಿಯಾಮಿಯಿಂದ ಬಂದಿದ್ದ ಹಾಫಿಝ್ ಇಮ್ರಾನ್ ಅಹ್ಮದ್ ಸಾಹಿಬ್ ಹೇಳಿದರು. ನಾನು ಕೃಷಿವಿಭಾಗದಲ್ಲಿ ಪ್ರೊಫಸೆಸರ್ ಆಗಿದ್ದೇನೆ, ಆಗ ಹುಝೂರ್ ಅನ್ವರ್(ಅಬಿಅ) ಹೇಳಿದರು. ಕೃಷಿ ಒಂದು ವಿಶಾಲವಾದ ಕ್ಷೇತ್ರವಾಗಿದೆ. ನೀವು ವಿಶೇಷವಾಗಿ ಏನು ಕಲಿಸುತ್ತೀರಿ? ನಾನು ಹೇಳಿದೆ. Feed science (ಆಹಾರ ವಿಜ್ಞಾನ) ಕಲಿಸುತ್ತಿದ್ದೇನೆ.

Micheal corpenter ತಮ್ಮ ಅಹಿಸಿಕೆ ಹೀಗೆ ವ್ಯಕ್ತಪಡಿಸಿದರು: ನಾನು ಕೇವಲ ಮೂರು ತಿಂಗಳ ಹಿಂದೆ ಬೈಅತ್ ಮಾಡಿರುವ ನವ ಅಹ್ಮದಿಯಾಗಿದ್ದೇನೆ. ಅವರನ್ನು ಈ ರೀತಿ ಭೇಟಿಯಾಗಬಹುದೆಂದು ಊಹಿಸಿಲಿಲ್ಲ. ಭೇಟಿ ಮಾಡಿದ ಮೇಲೆ ನನಗೆ ದೃಡವಾಯಿತು ಖಲೀಫರನ್ನು ಅಲ್ಲಾಹನೇ ಸ್ವಯಂ ನಿಯುಕ್ತಗೊಳಿಸುತ್ತಾನೆ ಎಂದು.

ಶಿಕಾಗೋ ಜಮಾಅತಿನಿಂದ ಸಯ್ಯದ್ ಸಾಖಿಕ್ ಸಾಹಿಬ್ ಹೇಳುತ್ತಾರೆ. ನನ್ನ ಪತ್ನಿ ಭೇಟಿ ಮಾಡುವಾಗ ಅತ್ತುಬಿಟ್ಟಳು. ಪತ್ನಿಯು 16 ವರ್ಷ ಹಿಂದೆ ಬೈಅತ್ ಮಾಡಿದ್ದಳು ಅವರು ಆಫ್ಘಾನಿಸ್ತಾನದವಳು. ಉರ್ದು ಸರಿಯಾಗಿ ಬರುವುದಿಲ್ಲ ಎಂಬ ಚಿಂತೆ ಕಾಡುತ್ತಿತ್ತು. ಹುಝೂರ್ ಅನ್ವರ್ ಹೇಳಿದರು. ನಿಮ್ಮ ಉರ್ದು ಸರಿಯಾಗಿದೆ. ಮತ್ತು ತಾವು ನವ ಅಹ್ಮದಿ ಎಂದು ಭಾವಿಸಿಕೊಳ್ಳುವುದು ಬೇಡ. ತಾವು ಹುಟ್ಟು ಅಹ್ಮದಿ ಎಂದೇ ತಿಳಿಯಿರಿ ಮತ್ತು ಹುಟ್ಟು ಅಹ್ಮದಿಯಿಂದ ಯಾವ ನಿರೀಕ್ಷೆ ಇರುತ್ತದೆ ಅದರಂತೆಯೇ ನಡೆದುಕೊಳ್ಳಿರಿ.

ಇಮ್ರಾನ್ ಚೌಧರಿ ಸಾಹಿಬ್ ಹೇಳಿದರು. ಹುಝೂರ್ ಅನ್ವರ್ ಪ್ರೀತಿಯಿಂದ ನನ್ನ ಮಗಳಿಗೆ ಕರ್ಚಿಫ್ ಮತ್ತು ಚಾಕ್ಲೇಟ್ ನೀಡಿದರು. ನನ್ನ ಸಂತೋಷಕ್ಕೆ ಪಾರವೇ ಇರಲಿಲ್ಲ.

ಅಲ್ತಾಫ್ ಮುನೀಬ್ ಸಾಹಿಬ್ Binghamton ಜಮಾಅತಿನಿಂದ ಬಂದಿದ್ದರು. ಅವರ ಹೇಳುತ್ತಾರೆ ಇಂದು ನಾನು ಹುಝೂರ್ ರವರ ಭೇಟಿ ಮಾಡಿದಾಗ ಅವರು ನನ್ನ ಮಾತನ್ನು ಗಮನಕೊಟ್ಟು ಆಲಿಸಿದರು ಮತ್ತು ತಮ್ಮ ಸಲಹೆಗಳನ್ನು ನೀಡಿದರು. ನನಗೆ ಇನ್ನೇನು ಬೇಕಾಗಿತ್ತು. ನನಗೆ ಎಲ್ಲವು ದೊರಕಿದ ಅನುಭವವಾಯಿತು.

Oshkosh ಜಮಾಅತಿನಿಂದ ಬಂದ ಹಾಫಿಝ್ ಇನ್‌ಆಮುಲ್ ಹಖ್ ಸಾಹಿಬ್ ತಮ್ಮ ಭಾವನೆಗಳನ್ನು ಹೀಗೆ ಹಂಚಿಕೊಳ್ಳುತ್ತಾ ನಾನು ತುಂಬಾ ಚಿಂತೆಗೆ ಒಳಗಾಗಿದ್ದೆ. ಹುಝೂರರನ್ನು ಭೇಟಿ ಮಾಡಿ ನನ್ನ ಎಲ್ಲ ಚಿಂತೆಗಳು ದೂರವಾದವು. ಹುಝೂರರ ಆಶೀರ್ವಾದ ನನ್ನ ಜೊತೆಯಲ್ಲಿದೆ.

ಭೇಟಿಯ ಈ ಕಾರ್ಯಕ್ರಮ 7 ಗಂಟೆ 30 ನಿಮಿಷಗಳವರೆಗೆ ನಡೆಯಿತು.

### ಅಹ್ಮದಿಯಾ ಮುಸ್ಲಿಮ್ ವಿಜ್ಞಾನಿಗಳ ಸಂಘದವರಿಂದ ಹುಝೂರ್ ಅನ್ವರ್ ಅವರ ಭೇಟಿ

ಈ ಭೇಟಿಯ ಕಾರ್ಯಕ್ರಮ ನಂತರ ಅಹ್ಮದಿಯಾ ಮುಸ್ಲಿಂ ವಿಜ್ಞಾನಿಗಳ ಸಂಘ ಹುಝೂರ್ ಅನ್ವರ್(ಅಬಿಅ) ಅವರ ಜೊತೆ ಭೇಟಿ ಮಾಡುವ ಕಾರ್ಯಕ್ರಮವಿತ್ತು ಈ ಭೇಟಿಯ ವ್ಯವಸ್ಥೆ ಒಂದು ಸಭಾಂಗಣದಲ್ಲಿ ಮಾಡಲಾಗಿತ್ತು. ಹುಝೂರ್ ಅನ್ವರ್ ಆ ಸಭಾಂಗಣಕ್ಕೆ ಆಗಮಿಸಿದರು. ಈ ಕಾರ್ಯಕ್ರಮದ ಪ್ರಾರಂಭ ಖುರ್‌ಆನ್ ಪಠಣದಿಂದಾಯಿತು. ಅದನ್ನು ಮುಕರ್ರಮ್ ಮುನೀಬ್ ಶರೀಫ್ ಸಾಬ್ ನೆರವೇರಿಸಿಕೊಟ್ಟರು. ಅನಂತರ ಡಾ. ಸುಹೇಲ್ ಹುಸೇನ್ ಸಾಹಿಬ್ ಆಫ್ ಸಿಲಿಕಾನ್‌ವೆಲಿ ತಮ್ಮ ಪರಿಚಯವನ್ನು ನೀಡಿದರು. ಡಾ. ಸಾಹಿಬ್ ಸ್ಟಿನ್‌ಫೋರ್ಡ್ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಲ್ಲಿ ಪ್ರೊಫೆಸರ್ ಆಗಿರುವರು. ಅವರು ಹೇಳುತ್ತಾರೆ. ಡಿಸೆಂಬರ್ 2019 ರಲ್ಲಿ ಅಹ್ಮದಿಯಾ ಮುಸ್ಲಿಂ Research contrance new ನಲ್ಲಿ ಹುಝೂರೆ ಅನ್ವರ್ ಭಾಷಣ ಮಾಡಿದ್ದರು. ಅವರ ಭಾಷಣದಿಂದಲೇ ಪ್ರೇರಣೆಗೊಂಡ ನಾವು ನಮ್ಮ ಗುರಿಗಳನ್ನು ಮುಂದಿಟ್ಟುಕೊಂಡೆವು. ನಮ್ಮ ಈ ಗುರಿ, ವಿಜ್ಞಾನ ಮತ್ತು ತಂತ್ರಜ್ಞಾನದ ಮುಂದಿನ ಇಸ್ಲಾಮಿಕ್ ಕಾಲದ ನೇತೃತ್ವ ಇನ್‌ಶಾಅಲ್ಲಾಹ್ ನಾವು ಅಹ್ಮದಿ ಮುಸ್ಲಿಂ ವಿಜ್ಞಾನಿಗಳು ವಹಿಸುವೆವು. ನಾವು ನಮ್ಮ ವಾರ್ಷಿಕ ಕಾರ್ಯಕ್ರಮಗಳಲ್ಲಿ ಖುರ್‌ಆನ್ ಮತ್ತು ವಿಜ್ಞಾನ ವಿಷಯದಲ್ಲಿ Symposium ಆಯೋಜಿಸುವುದು ನಮ್ಮ ಗುರಿಯಾಗಿದೆ ಎಂದು ಡಾ. ಸಾಹಿಬ್ ಹೇಳಿದರು.

ಹುಝೂರ್ ಅನ್ವರ್(ಅಬಿಅ) ಅವರೊಡನೆ ಕೇಳಿದರು. ಇಲ್ಲಿ ಸೇರಿರುವ ಸದಸ್ಯರಲ್ಲಿ ಎಷ್ಟು ಜನರಿದ್ದೀರಿ ಮತ್ತು ಅವರಲ್ಲಿ ಎಷ್ಟು ಜನ P.H.D. ಮಾಡುವವರಿದ್ದಾರೆ? ಆಗ ಅವರು ಹೇಳಿದರು. ಇಲ್ಲಿ 46 ಪುರುಷರು

*(ಪುಟ ಸಂಖೆ 10 ರಲ್ಲಿ ಮುಂದುವರಿಸಲಾಗಿದೆ)*

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE : 1800-103-2131**

**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**

**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.